KADK010004482022

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,**
**ದಕ್ಷಿಣ ಕನ್ನಡ, ಮಂಗಳೂರು.**

**ಸ್ಪೆಷಲ್ ಕೇಸ್ ನಂಬ್ರ: 11/2022**

| | | |
|---|---|---|
| ಆರೋಪಿಯ ಹೆಸರು | - | ಮೊಹಮ್ಮದ್ ಅಜಿನಾಸ್ (ಎ-1) |
| ತಂದೆಯ ಹೆಸರು | - | ಅಜೀಮ್ |
| ವಯಸ್ಸು | - | 25 ವರ್ಷ |
| ವಾಸಸ್ಥಳ | - | ವಡಕ್ಕೆ ಮುಳ್ಳಂಗೊತ್ತು ಹೌಸ್, ಮುಟ್ಟಂಗಲ್ ವೆಸ್ಟ್ ಪೋಸ್ಟ್, ವಡಕರ, ಕ್ಯಾಲಿಕಟ್ ಜಿಲ್ಲೆ, ಕೇರಳ ರಾಜ್ಯ |

**ಭಾರತ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313 ರ ಪ್ರಕಾರ ಆರೋಪಿಯ ಹೇಳಿಕೆ**

ಪ್ರ.ನಂ: 1 ಈ ಪ್ರಕರಣದಲ್ಲಿ ಅಭಿಯೋಜನೆಯ ಪರ ನ್ಯಾಯಾಲಯದಲ್ಲಿ ಮಾಡಿದ ಸಾಕ್ಷಿಗಳ ವಿಚಾರಣೆಯನ್ನು ಕೇಳಿದ್ದೀರಾ?

ಉತ್ತರ: ಕೇಳಿದ್ದೇನೆ

ಪ್ರ.ನಂ: 2 ಫ್ರಾಸಾ–1 – ಶ್ರೀ ವಿಧಾತ್ ರವರು ತಮ್ಮ ಸಾಕ್ಷದಲ್ಲಿ ಸುಮಾರು 5 ವರ್ಷಗಳ ಹಿಂದೆ ನಾನು ಮತ್ತು ಚಾಸಾ–4 ರವರು ಸ್ಟೇಟ್ ಬ್ಯಾಂಕ್ ಹತ್ತಿರ ಇದ್ದಾಗ ಪೊಲೀಸರು ಅಲ್ಲಿಗೆ ಬಂದು ಮಹಜರಿಗೆ ಸಹಕರಿಸಬೇಕು ಎಂದು ಕೇಳಿದಕ್ಕೆ ತಾವು ಒಪ್ಪಿ ಮಂಗಳೂರಿನ ಸ್ಟೇಟ್ ಬ್ಯಾಂಕ್ ನ ಹತ್ತಿರ ಇರುವ ಸಿಸಿಬಿ ಕಚೇರಿಗೆ ಹೋಗಿದ್ದು, ಅಲ್ಲಿ ನಿಪಿ–1 ನೋಟಿಸು, ನಿಪಿ–2 ದಿ. 10.06.2021 ರ ಮಹಜರು ಹಾಗೂ ನಿಪಿ–3 ದಿ. 10.06.2021 ರ ಸ್ವತ್ತು ಸ್ವಾಧೀನತಾ ಮಹಜರುಗಳಿಗೆ ಸಹಿ ಮಾಡಿದ್ದು, ಸದರಿ ದಾಖಲೆಗಳಲ್ಲಿ ತನ್ನ ಸಹಿಗಳು ನಿಪಿ–1(ಎ), ನಿಪಿ–2(ಎ) ಹಾಗೂ ನಿಪಿ–3(ಎ) ರಂತೆ ಇರುತ್ತವೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರ: ಸುಳ್ಳು

ಪ್ರ.ನಂ: 3 ಫ್ರಾಸಾ–1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಈಗ ತೋರಿಸಿದ

ಪೇಪರ್ ಕವರುಗಳಲ್ಲಿ ಪ್ಯಾಕ್ ಮತ್ತು ಸೀಲ್ ಮಾಡಿ ಅವುಗಳ ಒಂದರ ಮೇಲೆ ನೀಲಿ ಬಣ್ಣದ Redmi ಕಂಪನಿಯ Note 7 ಮೊಬೈಲ್ ಫೋನ್ ಎಂದು ಬರೆದಿದರ ಮೇಲೆ ಮತ್ತು ಇನ್ನೊಂದು ನೋಕಿಯಾ ಕಂಪನಿಯ ಕಿಪ್ಯಾಡ್ ಮೊಬೈಲ್ ಫೋನ್ ಒಂದು ಇದ್ದು ಅವುಗಳ ಮೇಲೆ ಅಂಟಿಸಿರುವ ನಿಪಿ–4 ಮತ್ತು ನಿಪಿ–5 ಚೀಟಿಗಳ ಮೇಲೆ ತನ್ನ ಸಹಿಗಳು ಸಹಿ ನಿಪಿ–4(ಎ) ಮತ್ತು ಸಹಿ ನಿಪಿ–5(ಎ) ರಂತೆ ಇರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರ.ನಂಃ 4 ಫ್ರಾಸಾ–1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನೀಲಿ ಬಣ್ಣದ Redmi ಕಂಪನಿಯ Note 7 ಮೊಬೈಲ್ ಫೋನ್ ಅನ್ನು ಮು.ಮಾ–1 ಎಂದು ಹಾಗೂ ನೋಕಿಯಾ ಕಂಪನಿಯ ಕಿಪ್ಯಾಡ್ ಮೊಬೈಲ್ ಫೋನ್ ಅನ್ನು ಮು.ಮಾ–2 ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 5 ಫ್ರಾಸಾ–2 ಶ್ರೀ ಮಹೇಶ ಪ್ರಸಾದ್ ರವರು ತಮ್ಮ ಸಾಕ್ಷ್ಯದಲ್ಲಿ ತಾನು ದಿ. 20.11.2020 ರಿಂದ 05.12.2022 ರ ವರೆಗೆ ಮಂಗಳೂರು ನಗರದ ಸಿಸಿಬಿ ಘಟಕದಲ್ಲಿ ಪೋಲಿಸ್ ಇನ್ಸಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸಿದ್ದು, ದಿ. 10.06.2021 ರಂದು ಅಪರಾಹ್ನ 2.00 ಗಂಟೆಗೆ ತಾನು ಸಿಸಿಬಿ ಕಚೇರಿಯಲ್ಲಿದ್ದಾಗ ಕದ್ರಿ ಮಲ್ಲಿಕಟ್ಟೆ ಪರಿಸರದಲ್ಲಿ ಮಹಮ್ಮದ್ ಅಜ್ಞಾಸ್ ಅಂದರೆ 1 ನೇ ಆರೋಪಿಯಾದ ನೀವು ಕೇರಳ ಮೂಲದ ವ್ಯಕ್ತಿ ತನ್ನ ಪ್ಯಾಶನ್ ಪ್ರೋ ಮೋಟರ್ ಸೈಕಲ್ ನಂಬ್ರ ಕೆಎಲ್–18 ಎಫ್ –3859 ನೇದರಲ್ಲಿ ಸಾರ್ವಜನಿಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಎಲ್ ಎಸ್ ಡಿ ಗಾಂಜಾ ಮತ್ತು ಹಶಿಶ್ ಎಂಬ ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿರುವ ಬಗ್ಗೆ ಬಾತ್ಮಿದಾರರು ತನಗೆ ದೂರವಾಣಿ ಮಾಲಕ ಮಾಹಿತಿ ನೀಡಿದ ಮೇರೆಗೆ ತಾನು ಈ ಮಾಹಿತಿಯನ್ನು ಲಿಖಿತವಾಗಿ ಚಾಸಾ–13 ರವರಿಗೆ ತಿಳಿಸಿ ಚಾಸಾ–1 ರವರಿಗೆ ಶೋಧನೆ ಮಾಡಲು ಅಧಿಕಾರ ಪತ್ರವನ್ನು ನೀಡುವಂತೆ ಕೋರಿಕೆ ಸಲ್ಲಿಸಿದ್ದು, ನಂತರ ಚಾಸಾ–13 ರವರು ಚಾಸಾ–1 ರವರಿಗೆ ದಾಳಿ ಮಾಡಲು ಅಧಿಕಾರ ಪತ್ರವನ್ನು ನಿಪಿ–7 ರಂತೆ ಕೊಟ್ಟಿರುವುದಾಗಿ ನುಡಿದಿರುತ್ತಾರೆ. ಈ

ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ6 ಫ್ರಾಸಾ-3 ಶ್ರೀ ಸೂರಜ್ ರೆಬೆಲೋ ರವರು ತಮ್ಮ ಸಾಕ್ಷ್ಯದಲ್ಲಿ 1 ನೇ ಆರೋಪಿಯಾದ ನೀವು ತಮ್ಮ ಕಟ್ಟಡದ ರೂಮ್ ನಂಬರ 15 ರಲ್ಲಿ ಬಾಡಿಗೆ ಇದ್ದು, ಈ ಘಟನೆಗೂ ಪೂರ್ವ ಒಂದೂವರೆ ವರ್ಷದಿಂದ ಪೋಲಿಸರು ದಸ್ತಗಿರಿ ಮಾಡುವವರೆಗೂ ಆತನು ಇರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ7 ಫ್ರಾಸಾ-3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ. 12.06.2021 ರಂದು 1 ನೇ ಆರೋಪಿಯಾದ ನೀವು ಬೆಳಗ್ಗೆ 9.30 ಗಂಟೆಗೆ ಪೋಲಿಸರ ಜೊತೆ ಸದರಿ ತಮ್ಮ ಕಟ್ಟಡಕ್ಕೆ ಬಂದು ತಾನು ಇರುವ ರೂಮ್ ಅನ್ನು ಪೋಲಿಸರಿಗೆ ತೋರಿಸಿ ತನ್ನ ಹತ್ತಿರ ಇದ್ದ ಕೀಲಿಯಿಂದ ರೂಮಿನ ಬಾಗಿಲನ್ನು ತೆಗೆದಿದ್ದು, ರೂಮಿನ ಒಳಗೆ ಹೋಗಿ 1 ನೇ ಆರೋಪಿಯಾದ ನೀವು ನಿಪಿ-8 ರ ಒಂದು ಪೋಸ್ಟಲ್ ಕವರನ್ನು ತೋರಿಸಿ ಅದರಲ್ಲಿ ಮಾದಕ ವಸ್ತು ಬರುತ್ತಿತ್ತು ಎಂದು ಹೇಳಿದ್ದು, ನಂತರ ಪೋಲಿಸರು ಸದರಿ ಕವರನ್ನು ಇನ್ನೊಂದು ನಿಪಿ-9 ರಂತೆ ಸಾದಾ ಕವರಿನಲ್ಲಿ ಹಾಕಿ ಅದನ್ನು ಪ್ಯಾಕ್ ಮತ್ತು ಸೀಲ್ ಮಾಡಿ ತೆಗೆದುಕೊಂಡು ಹೋಗಿದ್ದು, ಸದರಿ ಸಾದಾ ಕವರಿನ ಮೇಲೆ ತಾನು ಸಹಿ ಮಾಡಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ8 ಫ್ರಾಸಾ-3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಿಪಿ-9 ಕ್ಕೆ ಅಂಟಿಸಿದ ಚೀಟಿಯು ನಿಪಿ-10 ರಂತೆ ಇದ್ದು, ಅದರಲ್ಲಿ ತನ್ನ ಸಹಿ ನಿಪಿ-10(ಎ) ಯಂತೆ ಇರುತ್ತದೆ ಎಂದು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರ.ನಂಃ9 ಫ್ರಾಸಾ-3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಪೋಸ್ಟಲ್ ಕವರನ್ನು ಇನ್ನೊಂದು ಸಾದಾ ಕವರಿನಲ್ಲಿ ಹಾಕಿ ಸೀಲ್ ಮತ್ತು ಪ್ಯಾಕ ಮಾಡಿದ ಬಗ್ಗೆ ನಿಪಿ-11 ರಂತೆ ಮಹಜರನ್ನು ಬೆಳಗ್ಗೆ 9.30 ಗಂಟೆಯಿಂದ 10.30 ಗಂಟೆ ವರೆಗೆ ಮಾಡಿದ್ದು, ಸದರಿ ಮಹಜರಿನಲ್ಲಿ ತನ್ನ ಸಹಿ ನಿಪಿ-11 ಯಂತೆ ಇರುತ್ತದೆ

ಎಂದು ಗುರುತಿಸಿದ್ದು ಹಾಗೂ ತನ್ನ ಜೊತೆ ಸದರಿ ಮಹಜರಿಗೆ ತಮ್ಮ ವಾಚ್ ಮೆನ್ ಆದ ಚಾಸಾ–6 ರವರು ಕೂಡ ಸಹಿ ಮಾಡಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ10 ಫ್ರಾಸಾ–4 ಶ್ರಿ ಪರಮೇಶ್ವರ ಎ. ಹೆಗಡೆ ರವರು ತಮ್ಮ ಸಾಕ್ಷ್ಯದಲ್ಲಿ ತಾನು 02 ಏಪ್ರಿಲ್ 2021 ರಿಂದ ಜನವರಿ 2023 ರವರೆಗೆ ಮಂಗಳೂರು ಕೇಂದ್ರ ಉಪವಿಭಾಗ, ಮಂಗಳೂರಿನಲ್ಲಿ ಸಹಾಯಕ ಪೊಲೀಸ್ ಆಯುಕ್ತಕನಾಗಿ ಕರ್ತವ್ಯವನ್ನು ನಿರ್ವಹಿಸಿದ್ದು, ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಿ. 10.06.2021 ರಂದು ಸಂಜೆ ಸುಮಾರು 5.30 ಗಂಟೆಗೆ ಚಾಸಾ–1 ರವರು 1 ನೇ ಆರೋಪಿಯಾದ ನಿಮ್ಮನ್ನು ಮತ್ತು ಪಂಚರಾದ ಫ್ರಾಸಾ–1 ಮತ್ತು ಚಾಸಾ–4 ರವರನ್ನು ತಮ್ಮ ಕಚೇರಿಯಲ್ಲಿ ತನ್ನ ಮುಂದೆ ಹಾಜರುಪಡಿಸಿ ನಿಪಿ–12 ರಂತೆ ಅಂಗಶೋಧನೆ ಕೋರಿಕೆ ಪತ್ರವನ್ನು ಸಲ್ಲಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರ.ನಂಃ11 ಫ್ರಾಸಾ–4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ 1 ನೇ ಆರೋಪಿಯಾದ ನೀವು ಆರೋಪಿಯು ಮಲೆಯಾಳಂ ಭಾಷೆ ಮಾತನಾಡುತ್ತಿದ್ದರಿಂದ ನಿಮ್ಮ ಹೆಸರು ಮತ್ತು ವಿಳಾಸವನ್ನು ಚಾಸಾ–14 ರವರು ವಿಚಾರಿಸಿದ್ದು, ಚಾಸಾ–1 ರವರು 1 ನೇ ಆರೋಪಿಯಾದ ನಿಮಗೆ ಕೊಟ್ಟ ನೋಟಿಸ್ ಮತ್ತು ಉತ್ತರವನ್ನು ತನಗೆ ತೋರಿಸಿದ್ದು, ಆಗ ತಾನು 1 ನೇ ಆರೋಪಿಯಾದ ನಿಮಗೆ ಪತ್ರಾಂಕಿತ ಅಧಿಕಾರಿಯಾಗಿದ್ದು ಅಂಗ ಶೋಧನೆ ಮಾಡಬಹುದೆ ಎಂದು ಮೌಖಿಕವಾಗಿ ಕೇಳಿದ್ದು ಅದಕ್ಕೆ 1 ನೇ ಆರೋಪಿಯಾದ ನೀವು ಒಪ್ಪಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರ.ನಂಃ 12 ಫ್ರಾಸಾ–4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ತಾನು ಅಂಗ ಶೋಧನೆಯನ್ನು ಪ್ರಾರಂಭಿಸಿದಾಗ 1 ನೇ ಆರೋಪಿಯಾದ ನೀವು ತನ್ನ ಟೀ ಶರ್ಟ್ ನ ಎಡ ಬದಿಯ ಜೇಬಿನಿಂದ ಒಂದು ಪ್ಲಾಸ್ಟಿಕ್ ಕವರನ್ನು ತೆಗೆದು ತನ್ನ ಮುಂದೆ ಹಾಜರುಪಡಿಸಿದ್ದು, ಆಗ ಅದರಲ್ಲಿ ಏನು ಇದೆ ಎಂದು ಪಂಚರ ಸಮಕ್ಷಮ 1 ನೇ ಆರೋಪಿಯಾದ ನಿಮ್ಮನ್ನು ವಿಚಾರಿಸಿದಾಗ ಅದರಲ್ಲಿ

ಎಲ್.ಎಸ್.ಡಿ ಎನ್ನುವ ಮಾದಕವಸ್ತು ಸ್ಟಾಂಪ್ ರೂಪದಲ್ಲಿ ಇರುತ್ತದೆ ಎಂದು ಹೇಳಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರ,ನಂ.13 ಫ್ರಾಸಾ–4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಕವರನ್ನು ತೆಗೆದು ನೋಡಿದಾಗ ಅದರಲ್ಲಿ ಸ್ಟಾಂಪ್ ರೂಪದಲ್ಲಿ ಇರುವ ಮೂರು ಹಾಳೆಗಳು ಕಂಡು ಬಂದಿದ್ದು, ಮೊದಲನೇ ಹಾಳೆಯಲ್ಲಿ ಈಶ್ವರನ ಚಿತ್ರ ಇರುವ 280 ಎಲ್.ಎಸ್.ಡಿ ಸ್ಟಾಂಪ್ ಗಳು ಇದ್ದು, ಸದರಿ ಮೊದಲನೇ ಹಾಳೆಯು 18X12.5 cm ಇದ್ದು, ಪ್ರತಿಯೊಂದು ಸ್ಟಾಂಪ್ ಗಳು ಒಂದು ಸೆಂಟಿಮೀಟರ್ ಉದ್ದ ಇದ್ದು ಅದರ ತೂಕ 4.75 ಗ್ರಾಂ ಆಗಿತ್ತು ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರ,ನಂ.14 ಫ್ರಾಸಾ–4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಎರಡನೇ ಹಾಳೆಯನ್ನು ಪರಿಶೀಲಿಸಿದಾಗ ಸೈಕಲ್ ಮೇಲೆ ಸವಾರಿ ಮಾಡುತ್ತಿರುವ ನಗ್ನ ಮಹಿಳೆಯ ಚಿತ್ರ ಇರುವ 420 ಎಲ್.ಎಸ್.ಡಿ ಸ್ಟಾಂಪ್ ಗಳು ಇದ್ದು, ಸದರಿ ಎರಡನೇ ಹಾಳೆಯು 16X16.5 cm ಆಗಿದ್ದು, ಪ್ರತಿಯೊಂದು ಸ್ಟಾಂಪ್ ಗಳು 0.8 ಸೆಂಟಿಮೀಟರ್ ಉದ್ದ ಇದ್ದು, ಅದರ ತೂಕ 8 ಗ್ರಾಂ 1 ಮಿಲಿಗ್ರಾಂ ಆಗಿತ್ತು ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರ.ನಂಃ 15 ಫ್ರಾಸಾ–4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಮೂರನೇ ಹಾಳೆಯನ್ನು ಪರಿಶೀಲಿಸಿದಾಗ ಹೂವು ಮತ್ತು ಎಲೆಗಳು ಇರುವ ಡಿಸೈನ್ ಚಿತ್ರ ಇದ್ದು ಅದರಲ್ಲಿ 140 ಎಲ್.ಎಸ್.ಡಿ ಸ್ಟಾಂಪ್ ಗಳು ಇದ್ದು, ಪ್ರತಿಯೊಂದು ಸ್ಟಾಂಪ್ ಗಳು 0.8 ಸೆಂಟಿಮೀಟರ್ ಉದ್ದ ಇದ್ದು, ಅದರ ತೂಕ 2 ಗ್ರಾಂ 3 ಮಿಲಿಗ್ರಾಂ ಆಗಿತ್ತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರ.ನಂಃ 16 ಫ್ರಾಸಾ–4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಹೀಗೆ ಒಟ್ಟು 840 ಎಲ್.ಎಸ್.ಡಿ ಸ್ಟಾಂಪ್ ಗಳು ಇದ್ದು ಅವುಗಳ ಒಟ್ಟು ತೂಕ 15 ಗ್ರಾಂ 15 ಮಿಲಿಗ್ರಾಂ ಇದ್ದು, ಆರೋಪಿಯನ್ನು ವಿಚಾರಿಸಿದಾಗ ಅವುಗಳನ್ನು ಮಾರಾಟ ಮಾಡಲು ಅಥವಾ ವಶದಲ್ಲಿ ಇರಿಸಿಕೊಳ್ಳಲು ಪರವಾನಗಿ ಇರುವುದಿಲ್ಲ ಎಂದು

ತಿಳಿಸಿದ್ದು ಮತ್ತು ಅವುಗಳನ್ನು ಮಾರಾಟ ಮಾಡುವ ಉದ್ದೇಶದಿಂದ ಇಟ್ಟು ಕೊಂಡಿರುವುದಾಗಿ ತಿಳಿಸಿದ್ದು, ಹಾಗೆಯೆ ಮುಂದುವರೆದು ವಿಚಾರಿಸಿದಾಗ 1 ನೇ ಆರೋಪಿಯಾದ ನೀವು ಒಂದು ಸ್ಟಾಂಪ್ ಗೆ ರೂ.2,000/- ಗಳಂತೆ ಮಾರಾಟ ಮಾಡುವುದಾಗಿ ತಿಳಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 17 ಫ್ರಾಸಾ-4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಪಂಚರ ಸಮಕ್ಷಮ ಅವುಗಳನ್ನು ಪಾರದರ್ಶಕ ಪ್ಲಾಸ್ಟಿಕ್ ಕವರ್ ನಲ್ಲಿ ಹಾಕಿ ಸದರಿ ಪ್ಲಾಸ್ಟಿಕ್ ಕವರ್ ನ್ನು ಬಿಳಿ ಬಟ್ಟೆಯಲ್ಲಿ ಇಟ್ಟು ಹೊಲಿದು ಸಿಸಿಬಿ ಎಂದು ಅರಗು ಸೀಲ್ ಹಾಕಿ ಅದರ ಮೇಲೆ ಪಂಚರ ಮತ್ತು ತನ್ನ ಸಹಿ ಇರುವ ಚೀಟಿಯನ್ನು ಅಂಟಿಸಿದ್ದು, ಅದಕ್ಕೆ "A-1" ಎಂದು ಗುರುತು ಸಂಖ್ಯೆಯನ್ನು ನೀಡಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 18 ಫ್ರಾಸಾ-4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆರೋಪಿಯ ಹಾಫ್ ಪ್ಯಾಂಟ್ ನ ಬಲ ಕಿಸೆಯಿಂದ ಹಾಜರು ಪಡಿಸಿದ ಒಂದು ರೆಡ್ ಮೀ ಕಂಪನಿಯ ನೀಲಿ ಬಣ್ಣದ ನೋಟ್ 7 ಮೊಬೈಲ್ ನ್ನು envelope ಕವರಿನಲ್ಲಿ ಹಾಕಿ ಅದಕ್ಕೆ ಸಿಸಿಬಿ ಅರಗು ಸೀಲನ್ನು ಹಾಕಿ ಪ್ಯಾಕ್ ಮಾಡಿ ಅದರ ಮೇಲೆ ಪಂಚರ ಮತ್ತು ತನ್ನ ಸಹಿ ಇರುವ ಚೀಟಿಯನ್ನು ಅಂಟಿಸಿ ಅದಕ್ಕೆ "A-2" ಎಂದು ಗುರುತು ಸಂಖ್ಯೆಯನ್ನು ನೀಡಿದ್ದು, ಆ ಮೊಬೈಲ್ ನಲ್ಲಿ ಏರ್ಟೆಲ್ ಕಂಪನಿಯ ಸಿಮ್ ಇದ್ದು ಅದರ ನಂಬರ್ 6366296092 ಆಗಿತ್ತು ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 19 ಫ್ರಾಸಾ-4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ 1 ನೇ ಆರೋಪಿಯಾದ ನೀವು ಹಾಫ್ ಪ್ಯಾಂಟ್ ನ ಎಡ ಕಿಸೆಯಿಂದ ಹಾಜರುಪಡಿಸಿದ ಒಂದು ನೋಕಿಯಾ ಕಪ್ಪು ಬಣ್ಣದ 1100 ಕೀಪ್ಯಾಡ್ ಮೊಬೈಲನ್ನು ಇನ್ನೊಂದು envelope ಕವರಿನಲ್ಲಿ ಹಾಕಿ ಅದಕ್ಕೆ ಸಿಸಿಬಿ ಎಂದು ಅರಗು ಸೀಲ್ ನ್ನು ಹಾಕಿ ಪ್ಯಾಕ್ ಮಾಡಿ ಅದರ ಮೇಲೆ ಪಂಚರ ಮತ್ತು ನನ್ನ ಸಹಿ ಇರುವ ಚೀಟಿಯನ್ನು ಅಂಟಿಸಿ ಅದಕ್ಕೆ "A-3" ಎಂದು ಗುರುತು ಸಂಖ್ಯೆಯನ್ನು ನೀಡಿರುವುದಾಗಿ

ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 20 ಫ್ರಾಸಾ–4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಮಹಜರನ್ನು ನಿಪಿ–3 ರಂತೆ ಸಂಜೆ 5.45 ರಿಂದ 6.45 ಗಂಟೆಯವರೆಗೆ ಮಾಡಲಾಗಿದ್ದು, ಅದರಲ್ಲಿ ತನ್ನ ಸಹಿ ನಿಪಿ–3(ಬಿ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರ.ನಂಃ21 ಫ್ರಾಸಾ–4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಿಪಿ–3 ನ್ನು ಚಾಸಾ–14 ರವರು ಆರೋಪಿಗೆ ಮಲೆಯಾಳಂ ಭಾಷೆಗೆ ತರ್ಜುಮೆ ಮಾಡಿ ಹೇಳಿದ್ದು, ನಿಪಿ–3 ರ ಮೇಲೆ 1 ನೇ ಆರೋಪಿಯಾದ ನಿಮ್ಮ ಸಹಿ ನಿಪಿ–3(ಸಿ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ22 ಫ್ರಾಸಾ–4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ರೆಡ್ ಮೀ ಕಂಪನಿಯ ನೀಲಿ ಬಣ್ಣದ ನೋಟ್ 7 ಮೊಬೈಲನ್ನು ಮು.ಮಾ–1 ಎಂದು, ಮು.ಮಾ–1 ರ ಮೇಲೆ ಇರುವ ಚೀಟಿಯನ್ನು ಈಗಾಗಲೇ ನಿಪಿ–4 ಎಂದು ಹಾಗೂ ಅದರಲ್ಲಿ ತನ್ನ ಸಹಿ ನಿಪಿ–4(ಬಿ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 23 ಫ್ರಾಸಾ–4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನೋಕಿಯಾ ಕಪ್ಪು ಬಣ್ಣದ 1100 ಕೀಪ್ಯಾಡ್ ಮೊಬೈಲನ್ನು ಮು.ಮಾ–2 ಎಂದು, ಮು.ಮಾ–2 ರ ಮೇಲೆ ಇರುವ ಚೀಟಿಯನ್ನು ಈಗಾಗಲೇ ನಿಪಿ–5 ಎಂದು ಹಾಗೂ ಅದರಲ್ಲಿ ತನ್ನ ಸಹಿ ನಿಪಿ–5(ಬಿ)ಯಂತೆ ಇರುತ್ತದೆ ಎಂದು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ24 ಫ್ರಾಸಾ–4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆರೋಪಿ ಮತ್ತು ಸ್ವತ್ತುಗಳನ್ನು ಚಾಸಾ–1 ರವರ ಸ್ವಾಧೀನಕ್ಕೆ ಕೊಟ್ಟಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 25 ಫ್ರಾಸಾ–5 ಶ್ರೀ ಪಾಂಡುರಂಗ ಆರ್ ಪಮ್ಮಾರ್ ರವರು ತಮ್ಮ ಸಾಕ್ಷ್ಯದಲ್ಲಿ ತಾನು 2006 ರಿಂದ ಮೇ 2025 ರವರೆಗೆ ನ್ಯಾಶನಲ್ ಹೈಸ್ಕೂಲ್, ಗಂಟಕೇರಿ, ಹುಬ್ಬಳ್ಳಿಯಲ್ಲಿ ಪ್ರಾಂಶುಪಾಲರಾಗಿ ಕರ್ತವ್ಯವನ್ನು ನಿರ್ವಹಿಸಿದ್ದು, ದಿ. 23.06.2021 ರಂದು ಹುಬ್ಬಳ್ಳಿಯ ಗೋಕುಲರೋಡ್ ಪೊಲೀಸ್ ಠಾಣೆಯವರು ತನ್ನನ್ನು ಠಾಣೆಗೆ ಕರೆಯಿಸಿದ್ದು, ತಾನು ಅಲ್ಲಿಗೆ ಹೋದಾಗ ಅಲ್ಲಿ ಮಂಗಳೂರಿನ ಪೂರ್ವ ಪೊಲೀಸರು ಇದ್ದು, ಅಲ್ಲಿ ಉಮೇಶ್ ಎಂಬ ಹೆಸರಿನ ಆರೋಪಿ (ಈ ಪ್ರಕರಣದಿಂದ ಬೇರ್ಪಡಿಸಲ್ಪಟ್ಟ 2 ನೇ ಆರೋಪಿ) ಪೊಲೀಸರ ಜೊತೆ ಇದ್ದು, ಆಗ ಸದರಿ ಆರೋಪಿಯು ತನ್ನ ಮನೆಯನ್ನು ತೋರಿಸುವುದಾಗಿ ಹೇಳಿ ತಮ್ಮನ್ನು ಹುಬ್ಬಳ್ಳಿಯ ತೋಳನಕೆರೆಯಲ್ಲಿರುವ ತಮ್ಮ ಮನೆಗೆ ಕರೆದುಕೊಂಡು ಹೋಗಿ ಅದರ ಒಳಗೆ ಬೆಡ್ ರೂಂಗೆ ಕರೆದುಕೊಂಡು ಹೋಗಿ ಕಪಾಟಿನ ಒಳಗಿನಿಂದ ಒಂದು ಗಾಂಜಾದ ಕಟ್ಟನ್ನು ತೆಗೆದು ಹಾಜರುಪಡಿಸಿ ಅದನ್ನು ತನ್ನ ಮಂಗಳೂರಿನ ಗೆಳೆಯನಿಂದ ತಂದಿರುವುದಾಗಿ ಹೇಳಿರುತ್ತಾನೆ ಎಂದು ನುಡಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 26 ಫ್ರಾಸಾ–5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದನ್ನು ಪೊಲೀಸರು ತೂಕ ಮಾಡಿದಾಗ 2.36 ಕಿಲೋ ಇದ್ದು ಅದನ್ನು ನಿಪಿ–13 ರ ಮಹಜರು ಅಮಾನತುಪಡಿಸಿಕೊಂಡಿದ್ದು, ಸದರಿ ಮಹಜರನ್ನು ಬೆಳಿಗ್ಗೆ 10.30 ರಿಂದ 11.30 ಗಂಟೆಯವರೆಗೆ ಮಾಡಿದ್ದು ಅದರಲ್ಲಿ ತನ್ನ ಸಹಿ ನಿಪಿ–13(ಎ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 27 ಫ್ರಾಸಾ–5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಪೊಲೀಸರು ತನಗೆ ಸಾಕ್ಷಿಯಾಗಿ ಬರಬೇಕು ಎಂದು ನಿಪಿ–14 ರಂತೆ ನೋಟಿಸನ್ನು ಕೊಟ್ಟಿದ್ದು, ಅದರಲ್ಲಿ ತನ್ನ ಸಹಿ ನಿಪಿ–14(ಎ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 28 ಫ್ರಾಸಾ–5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಹಾಗೆಯೇ ಸದರಿ ಆರೋಪಿಯಿಂದ ಒಂದು ಮೊಬೈಲನ್ನು ಅಮಾನತುಪಡಿಸಿಕೊಂಡಿದ್ದು, ಸದರಿ ಮೊಬೈಲನ್ನು ಮು.ಮಾ–3 ಎಂದು ಗುರುತಿಸಿದ್ದು, ಸದರಿ ಬಿಳಿ ಬಟ್ಟೆಯ ಪ್ಯಾಕ್

ನ ಮೇಲೆ ಅಂಟಿಸಿರುವ ಚೀಟಿಯನ್ನು ನಿಪಿ-15 ಎಂದೂ ಅದರಲ್ಲಿ ತನ್ನ ಸಹಿ ನಿಪಿ-15(ಎ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 29 ಫ್ರಾಸಾ-6 ಶ್ರೀ ದಿನೇಶ್ ಶೆಟ್ಟಿ ರವರು ತಮ್ಮ ಸಾಕ್ಷ್ಯದಲ್ಲಿ ತಾನು 2005 ರಿಂದ 2023 ರವರೆಗೆ ಕಂಕನಾಡಿ ಪೋಸ್ಟ್ ಆಫೀಸ್ ನಲ್ಲಿ ಪೋಸ್ಟ್ ಮನ್ ಆಗಿ ಕರ್ತವ್ಯವನ್ನು ನಿರ್ವಹಿಸಿದ್ದು ದಿ. 10.06.2021 ರಂದು ಅಜಿನಾಸ್ ಅಂದರೆ 1 ನೇ ಆರೋಪಿಯಾದ ನಿಮಗೆ A-2, ಸಿಟಾಡೆಲ್ ಅಪಾರ್ಟ್ ಮೆಂಟ್, ಕದ್ರಿ ದೇವಸ್ಥಾನ ರಸ್ತೆ, ಮಂಗಳೂರು ಈ ವಿಳಾಸಕ್ಕೆ ಒಂದು ನೊಂದಣಿ ಅಂಚೆ ಪಾರ್ಸೆಲ್ ಬಂದಿದ್ದು ಅದನ್ನು ತಾನು ತಮ್ಮ ಅಂಚೆ ಕಚೇರಿಯಿಂದ ತೆಗೆದುಕೊಂಡು ಹೋದಾಗ ಸದರಿ ಅಪಾರ್ಟ್ ಮೆಂಟ್ ನಲ್ಲಿಯ ಪ್ಲಾಟ್ ನ ಬಾಗಿಲನ್ನು ಲಾಕ್ ಮಾಡಿಲಾಗಿದ್ದು, ಆಗ ತಾನು ಕೆಳಗೆ ಬಂದು ಸೆಕ್ಯೂರಿಟಿ ಅವರನ್ನು ವಿಚಾರಿಸಿದಾಗ ಸದರಿ ಅಜಿನಾಸ್ ಅಂದರೆ 1 ನೇ ಆರೋಪಿಯಾದ ನೀವು ಬರುವುದು ತಡವಾಗುತ್ತದೆ ಎಂದು ಹೇಳಿದ್ದು ಆಗ ತಾನು 1 ನೇ ಆರೋಪಿಯಾದ ನಿಮಗೆ ಮಾಹಿತಿಯನ್ನು ನೀಡಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 30 ಫ್ರಾಸಾ-6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ತಾನು ಇನ್ನು ಅಲ್ಲೇ ಇದ್ದಾಗ ಬೆಳಿಗ್ಗೆ 10.45 ಗಂಟೆಗೆ ಸೆಕ್ಯೂರಿಟಿಗೆ ಕರೆ ಬಂದಿದ್ದು ಆಗ ಸೆಕ್ಯೂರಿಟಿಯೂ ಸದರಿ ಅಜಿನಾಸ್ ಅಂದರೆ 1 ನೇ ಆರೋಪಿಯಾದ ನೀವು ಪೋನ್ ಮಾಡಿದ್ದು ಸ್ಧಧದಲ್ಲಿ ಬರುವುದಾಗಿ ಹೇಳಿದ್ದು, ಫೋನ್ ಮಾಡಿದ 10-20 ನಿಮಿಷಗಳ ನಂತರ ಸದರಿ ಅಜಿನಾಸ್ ಅಂದರೆ 1 ನೇ ಆರೋಪಿಯಾದ ನೀವು ಬಂದಿದ್ದು ನಿಮ್ಮ ಕೈಗೆ ತಾನು ನೊಂದಣಿ ಅಂಚೆ ಪಾರ್ಸೆಲ್ ನ್ನು ಕೊಟ್ಟಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 31 ಫ್ರಾಸಾ-6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಪಾರ್ಸಲ್ ನ್ನು ಪಡೆದುಕೊಂಡ ನಂತರ 1 ನೇ ಆರೋಪಿಯಾದ ನೀವು ನಿಪಿ-16 ರ ಡಿಲಿವೆರಿ

ನೋಟ್ ಗೆ ಸಹಿ ಮಾಡಿಕೊಟ್ಟಿದ್ದು, ಅದರಲ್ಲಿ ಸಂಬಂಧಪಟ್ಟ ನಮೂದನ್ನು ನಿಪಿ-16(ಎ) ಎಂದು ಗುರುತಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 32 ಫ್ರಾಸಾ-6 ರವರು ಮುಂದುರೆದು ತಮ್ಮ ಸಾಕ್ಷ್ಯದಲ್ಲಿ 1 ನೇ ಆರೋಪಿಯಾದ ನಿಮಗೆ ಪಾರ್ಸಲ್ ನಂಬರ್ LB148954145FR ಇದ್ದು ಸದರಿ ಪಾರ್ಸೆಲ್ ಫ್ರಾನ್ಸ್ ದೇಶದಿಂದ ಬಂದಿದ್ದು ಸುಮಾರು 20 ದಿನಗಳ ನಂತರ ಕದ್ರಿ ಪೊಲೀಸರು ತನ್ನನ್ನು ಪೊಲೀಸ್ ಠಾಣೆಗೆ ಕರೆಸಿ 1 ನೇ ಆರೋಪಿಯಾದ ನಿಮ್ಮ ವಿರುದ್ಧ ಪ್ರಕರಣ ದಾಖಲಾಗಿರುತ್ತದೆ ಎಂದು ತಿಳಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 33 ಫ್ರಾಸಾ-6 ರವರು ಮುಂದುರೆದು ತಮ್ಮ ಸಾಕ್ಷ್ಯದಲ್ಲಿ ಆಗ 1 ನೇ ಆರೋಪಿಯಾದ ನಿಮ್ಮ ಫೊಟೋವನ್ನು ಪೊಲೀಸರು ತನಗೆ ತೋರಿಸಿದ್ದು ತಾನು ಆತನಿಗೆ ದಿ. 10.06.2021 ರಂದು ಒಂದು ಪಾರ್ಸೆಲ್ ನ್ನು ಕೊಟ್ಟಿರುವುದಾಗಿ ಹೇಳಿದ್ದು ಆಗ ಪೊಲೀಸರು ಪಾರ್ಸಲ್ ನಂಬರ್ LB148954145FR ನ್ನು ತನಗೆ ತೋರಿಸಿದ್ದು ಅದನ್ನು ತಾನು ಗುರುತಿಸಿ ಅದನ್ನೇ 1 ನೇ ಆರೋಪಿಯಾದ ನಿಮಗೆ ತಲುಪಿಸಿರುವುದಾಗಿ ಹೇಳಿರುತ್ತೇನೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 34 ಫ್ರಾಸಾ-6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ತಾನು 1 ನೇ ಆರೋಪಿಯಾದ ನಿಮಗೆ ಡೆಲಿವರಿ ಮಾಡಿದ ಪಾರ್ಸೆಲ್ ನ ಕವರನ್ನು ಈಗಾಗಲೇ ನಿಪಿ-8 ಎಂದು ಗುರುತಿಸಿದ್ದು, ಪೊಲೀಸರು ತನ್ನನ್ನು ವಿಚಾರಿಸಿ ಹೇಳಿಕೆಯನ್ನು ತೆಗೆದುಕೊಂಡಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ35 ಫ್ರಾಸಾ-7 ಶ್ರೀ ಶ್ರೀಹರ್ಷ ರವರು ತಮ್ಮ ಸಾಕ್ಷ್ಯದಲ್ಲಿ ತಾನು ಫೆಬ್ರವರಿ 2019 ರಿಂದ ಮೇ 2023 ರವರೆಗೆ ಕಂಕನಾಡಿ ಅಂಚೆ ಕಚೇರಿ, ಮಂಗಳೂರಿನಲ್ಲಿ ಹಿರಿಯ ಸೂಪರಿಟೆಂಡಂಟ್ ಆಫ್ ಪೋಸ್ಟ್ ಆಫೀಸ್, ಕರ್ತವ್ಯವನ್ನು ನಿರ್ವಹಿಸಿದ್ದು, ಈ

ಘಟನೆಗೆ ಸಂಬಂಧಿಸಿದಂತೆ ದಿ. 17.06.2021 ರಂದು ತನಗೆ ಕದ್ರಿ ಪೊಲೀಸ್ ಠಾಣೆಯ ಠಾಣಾಧಿಕಾರಿ ಇವರು ಒಂದು ನೊಂದಣಿ ಪಾರ್ಸೆಲ್ ಪಾರ್ಸಲ್ ನಂಬರ್ LB148954145FR ಗೆ ಸಂಬಂಧಪಟ್ಟಂತೆ ಅಜಿನಾಸ್ ಅನಂರೆ 1 ನೇ ಆರೋಪಿಯಾದ ನಿಮಗೆ ದಿ. 10.06.2021 ರಂದು ಡೆಲಿವೆರಿ ಆದ ಬಗ್ಗೆ ಇರುವ ದಾಖಲೆಯನ್ನು ಒದಗಿಸಬೇಕು ಎಂದು ಕೋರಿಕೆ ಪತ್ರವನ್ನು ಸಲ್ಲಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 36 ಫ್ರಾಸಾ–7 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಕೋರಿಕೆ ಪತ್ರಕ್ಕೆ ತಾನು ದಿ. 22.06.2021 ರಂದು ನಿಪಿ–17 ರಂತೆ ಉತ್ತರವನ್ನು ನೀಡಿದ್ದು, ಅದರಲ್ಲಿ ತನ್ನ ಸಹಿ ನಿಪಿ–17(ಎ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 37 ಫ್ರಾಸಾ–7 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಫ್ರಾಸಾ–6 ರವರು ಕಂಕನಾಡಿ ಅಂಚೆ ಕಚೇರಿಯ ಬೀಟ್ ನಂಬರ್ 14 ರ ಪೋಸ್ಟ್ ಮನ್ ಆಗಿದ್ದು, ಫ್ರಾಸಾ–6 ರವರು ಸದರಿ ಅಜಿನಾಸ್ ಅಂದರೆ 1 ನೇ ಆರೋಪಿಯಾದ ನಿಮಗೆ ಅಂತರಾಷ್ಟ್ರೀಯ ನೊಂದಣಿ ಪಾರ್ಸೆಲ್ ನ್ನು ಡೆಲಿವೆರಿ ಮಾಡಿ Delivery manifest ಗೆ ಸಹಿಯನ್ನು ಪಡೆದಿದ್ದರು ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 38 ಫ್ರಾಸಾ–7 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ತಮ್ಮ ಅಂಚೆ ಕಚೇರಿಯಿಂದ ಸದರಿ ಅಜಿನಾಸ್ ಅಂದರೆ 1 ನೇ ಆರೋಪಿಯಾದ ನಿಮಗೆ ಅಂತರಾಷ್ಟ್ರೀಯ ನೊಂದಣಿ ಪಾರ್ಸೆಲ್ ಡೆಲಿವೆರಿ ಆದ ಬಗ್ಗೆ Delivery manifest ನ ದೃಢೀಕೃತ ನಕಲನ್ನು ನಿಪಿ–16 ರಂತೆ ಪೊಲೀಸರಿಗೆ ಕೊಟ್ಟಿದ್ದು, ಅದರಲ್ಲಿ ತನ್ನ ಸಹಿ ನಿಪಿ–16(ಬಿ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 39 ಫ್ರಾಸಾ–8 ಶ್ರೀ ಹರಿರಾಮ್ ಶಂಕರ್ ರವರು ತಮ್ಮ ಸಾಕ್ಷ್ಯದಲ್ಲಿ ತಾನು ದಿ.18.11.2020 ರಿಂದ ದಿ. 27.06.2022 ರವರೆಗೆ ಮಂಗಳೂರು ನಗರ

ವಿಭಾಗದಲ್ಲಿ ಉಪ ಪೊಲೀಸ್ ಆಯುಕ್ತರಾಗಿ (ಕಾನೂನು ಮತ್ತು ಸುವ್ಯವಸ್ಥೆ)ಯಲ್ಲಿ ಕರ್ತವ್ಯವನ್ನು ನಿರ್ವಹಿಸಿದ್ದು , ದಿ. 10.06.2021 ರಂದು ಮಧ್ಯಾಹ್ನ ಸುಮಾರು 2.15 ಗಂಟೆಗೆ ಚಾಸಾ–1 ರವರು ತಮ್ಮ ಕಚೇರಿಗೆ ಬಂದು ಫ್ರಾಸಾ–2 ರವರು ನಿಪಿ–18 ರಂತೆ ನೀಡಿದ ಪತ್ರವನ್ನು ತನಗೆ ನೀಡಿದ್ದು, ಅದರಲ್ಲಿ ಕೇರಳ ಮೂಲತಃ ಮೊಹಮ್ಮದ್ ಅಜಿನಾಸ್ ಅಂದರೆ 1 ನೇ ಆರೋಪಿಯಾದ ನೀವು KL–18–F–3859 ನಂಬರ್ ನ ಹಿರೋ ಹೊಂಡಾ ಪ್ಯಾಶನ್ ಮೋಟಾರ್ ಸೈಕಲ್ ನಲ್ಲಿ ಕದ್ರಿ ಮಲ್ಲಿಕಟ್ಟೆ ಬೋಳಾರ್, ಲಾಲ್ ಬಾಗ್ ಮತ್ತು ಶಿವಭಾಗ್ ಪ್ರದೇಶಗಳಲ್ಲಿ ಎಲ್.ಎಸ್.ಡಿ, ಆಶಿಶ್ ಮತ್ತು ಗಾಂಜಾವನ್ನು ಮಾರಾಟ ಮಾಡಲು ಓಡಾಡುತ್ತಿದ್ದಾರೆ ಎಂದು ಮಾಹಿತಿ ಬಂದಿರುತ್ತದೆ ಎಂದು ಹೇಳಲಾಗಿತ್ತು ಮತ್ತು ಶೋಧನೆಗೆ ವಾರೆಂಟ್ ನ್ನು ಹೊರಡಿಸಬೇಕಾಗಿ ಕೋರಲಾಗಿತ್ತು ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 40 ಫ್ರಾಸಾ–8 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದೇ ದಿನ ತಾನು ಈ ಬಗ್ಗೆ ಪ್ರಾಥಮಿಕ ಪರಿಶೀಲನೆ ಮಾಡಿದ ನಂತರ ನಿಪಿ–7 ರಂತೆ ಶೋಧನಾ ವಾರೆಂಟ್ ನ್ನು ಚಾಸಾ–1 ರವರಿಗೆ ನೀಡಿದ್ದು, ಅದರಲ್ಲಿ ತನ್ನ ಸಹಿ ನಿಪಿ–7(ಎ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 41 ಫ್ರಾಸಾ–8 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಿಪಿ–18 ನ್ನು ತಾನು ಪಡೆದುಕೊಂಡಾಗ ಮಧ್ಯಾಹ್ನ 2.15 ಆಗಿದ್ದು, ನಿಪಿ–7 ನ್ನು ಕೊಟ್ಟಾಗ ಮದ್ಯಾಹ್ನ 2.45 ಗಂಟೆ ಆಗಿತ್ತು ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 42 ಸಾ–9 ಶ್ರೀ ಪ್ರದೀಪ್ ಟಿ.ಆರ್. ರವರು ತಮ್ಮ ಸಾಕ್ಷ್ಯದಲ್ಲಿ ತಾನು ದಿನಾಂಕ 22.08.2020 ರಿಂದ ದಿ. 14.11.2022 ರವರೆಗೆ ಮಂಗಳೂರಿನ ಸಿಸಿಬಿ ಘಟಕದಲ್ಲಿ ಪೊಲೀಸ್ ಉಪ ನಿರೀಕ್ಷಕರಾಗಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದು ದಿ. 10.06.2021 ರಂದು ಮಧ್ಯಾಹ್ನ 2.00 ಗಂಟೆಗೆ ಫ್ರಾಸಾ–2 ರವರು ಸಿಸಿಬಿ

ಕಚೇರಿಯಲ್ಲಿದ್ದಾಗ ಬಾತ್ಮಿದಾರರಿಂದ ಮೊಹಮ್ಮದ್ ಅಜಿನಾಸ್ ಎಂಬ ಕೇರಳ ಮೂಲದ ವ್ಯಕ್ತಿಯು ಅಂದರೆ 1 ನೇ ಆರೋಪಿಯಾದ ನೀವು ಕದ್ರಿ ಮಲ್ಲಿಕಟ್ಟೆ ಪರಿಸರದಲ್ಲಿ KA-18/F-3859 ಬೈಕಿನಲ್ಲಿ ಎಲ್.ಎಸ್.ಡಿ, ಅಶೀಶ್, ಗಾಂಜಾ ಮತ್ತು ಇತರ ಮಾದಕವಸ್ತುಗಳನ್ನು ಸಾರ್ವಜನಿಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಮಾರಾಟ ಮಾಡುತ್ತಿದ್ದಾನೆ ಎಂಬ ಮಾಹಿತಿಯು ಬಂದಿದ್ದು ಅವರು ಸದರಿ ವಿಷಯವನ್ನು ತನಗೆ ತಿಳಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 43 ಫ್ರಾಸಾ-9 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಸದರಿ ವಿಷಯವನ್ನು ಫ್ರಾಸಾ-2 ರವರು ಲಿಖಿತ ರೂಪದಲ್ಲಿ ಡಿಸಿಪಿ ಕ್ರೈಂ ಇವರಿಗೆ ಮಾಹಿತಿಯನ್ನು ಕೊಟ್ಟು ಅವರಿಂದ ತನಗೆ ನಿಪಿ-7 ರಂತೆ ಶೋಧನಾ ವಾರೆಂಟನ್ನು ಕೊಡಿಸಿದ್ದು ಅದನ್ನು ತಾನು ಪಡೆದುಕೊಂಡಿದ್ದು ಅದರಲ್ಲಿ ತನ್ನ ಸ್ವೀಕೃತಿ ಸಹಿ ನಿಪಿ-7(ಬಿ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 44 ಫ್ರಾಸಾ-9 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಅದೇ ದಿನ ಮಧ್ಯಾಹ್ನ 3.00 ಗಂಟೆಗೆ ತಮ್ಮ ಕಚೇರಿಯಿಂದ ತಾನು, ಚಾಸಾ-14 ರಿಂದ ಚಾಸಾ-21 ಅವರ ಜೊತೆ ಇಲಾಖಾ ವಾಹನವಾದ ಟೆಂಪೊ ಟ್ರಾವೆಲರ್ KA-19/G-598 ರಲ್ಲಿ ಹೊರಟು ಕ್ಲಾಕ್ ಟವರ್, ಹಂಪನಕಟ್ಟೆ , ಜ್ಯೋತಿ ಸರ್ಕಲ್, ಬಂಟ್ಸ್ ಹಾಸ್ಟೆಲ್ ಮೂಲಕ ಹೊರಟು ತೇಜಸ್ವಿನಿ ಆಸ್ಪತ್ರೆ ಕದ್ರಿ ಬಳಿ ವಾಹನವನ್ನು ನಿಲ್ಲಿಸಿ, ಅಲ್ಲಿ ದಾರಿಯಲ್ಲಿ ಹೋಗುತ್ತಿದ್ದ ಫ್ರಾಸಾ-1 ಮತ್ತು ಚಾಸಾ-4 ರವರಿಗೆ ವಿಷಯವನ್ನು ತಿಳಿಸಿ ಪಂಚರಾಗಿ ಬರುವಂತೆ ನಿಪಿ-1 ರಂತೆ ಕೋರಿಕೆ ಪತ್ರವನ್ನು ನೀಡಿದ್ದು, ಅದರಲ್ಲಿ ತನ್ನ ಸಹಿ ನಿಪಿ-1(ಬಿ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 45 ಫ್ರಾಸಾ-9 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಪಂಚರು ಹಾಗೂ ತಮ್ಮ ಸಿಬ್ಬಂದಿಗಳು ಅಲ್ಲಿಯೇ ನಿಂತುಕೊಂಡಿದ್ದಾಗ ಮಧ್ಯಾಹ್ನ ಸುಮಾರು 3.45 ಗಂಟೆಗೆ ಮೈದಾನ ಕ್ರಾಸ್ ನಿಂದ ತೇಜಸ್ವಿನಿ ಆಸ್ಪತ್ರೆಯಿಂದ 2 ನೇ ಕಟ್ಟಡದ

ಯೂನಿಯನ್ ಬ್ಯಾಂಕಿನ ಎದುರುಗಡೆ ಇರುವ ಡಾಂಬರ್ ರಸ್ತೆಯ ಪೂರ್ವ ದಿಕ್ಕಿನಲ್ಲಿ ಆರೋಪಿ ಬೈಕ್ ನಂಬರ್ KL-18/F-3859 ರ ಮೇಲೆ ಕುಳಿತುಕೊಂಡು ಯಾರಿಗೊ ಕಾಯುತ್ತಿರುವುದು ಕಂಡು ಬಂದಿದ್ದು ಆಗ ತಾವು ಸೂಕ್ಷ್ಮವಾಗಿ ನೋಡಿದಾಗ ಸದರಿ ವ್ಯಕ್ತಿಯು ಅಜಿನಾಸ್ ಅಂದರೆ 1 ನೇ ಆರೋಪಿಯಾದ ನೀವು ಎಂದು ಮನವರಿಕೆ ಮಾಡಿಕೊಂಡು ಸಿಬ್ಬಂದಿ ಮತ್ತು ಪಂಚರೊಂದಿಗೆ ನಿಮ್ಮ ಬಳಿಗೆ ಹೋದಾಗ 1 ನೇ ಆರೋಪಿಯಾದ ನೀವು ತಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನಿಸಿದಾಗ ನಿಮ್ಮನ್ನು ಸಿಬ್ಬಂದಿಗಳ ಸಹಾಯದಿಂದ ಹಿಡಿದು ನಿಮ್ಮ ಹೆಸರು ಮತ್ತು ವಿಳಾಸವನ್ನು ಕೇಳಲಾಗಿ ನೀವು ತನ್ನ ಹೆಸರು ಮೊಹಮ್ಮದ್ ಅಜಿನಾಸ್, 25 ವರ್ಷ, ತಂದೆ ಹೆಸರು ಅಜೀಜ್ ವಡಗರ, ಕ್ಯಾಲಿಕಟ್ ಜಿಲ್ಲೆ, ಕೇರಳ ರಾಜ್ಯ, ಪ್ರಸ್ತುತ ಮಂಗಳೂರಿನ ಸೂರಜ್ ರವರಿಗೆ ರೆಬೆಲೊ ಪಿ.ಜಿ, ಗೋಕಲು ರೆಸಿಡೆನ್ಸಿ ಅಪಾರ್ಟ್‌ಮೆಂಟ್ ನ ಬಳಿ ಕದ್ರಿ ಕಂಬಳ ರಸ್ತೆ ಎಂದು ತಿಳಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 46 ಫ್ರಾಸಾ-9 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಆತನು ಅಂದರೆ 1 ನೇ ಆರೋಪಿಯಾದ ನೀವು ಧರಿಸಿದ್ದ ಟೀ ಶರ್ಟ್ ನ ಎಡ ಕಿಸೆಯಲ್ಲಿ ಇದ್ದ ಒಂದು ಪ್ಲಾಸ್ಟಿಕ್ ಕವರಿನ ಬಗ್ಗೆ ವಿಚಾರಿಸಿದಾಗ, ಅದರಲ್ಲಿ ಎಲ್.ಎಸ್.ಡಿ ಸ್ಟಾಂಪ್ ಎಂಬ ಮಾದಕವಸ್ತು ಇರುವುದಾಗಿ ಹೇಳಿರುತ್ತಾನೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 47 ಫ್ರಾಸಾ-9 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಎಲ್.ಎಸ್.ಡಿ ಸ್ಟಾಂಪ್ ನ ಬಗ್ಗೆ ವಿಚಾರಿಸಿದಾಗ, ಮುಂಬೈನ ಅಶ್ವಿನ್ ಎಂದರೆ 3 ನೇ ಆರೋಪಿಯು ಮೂರು ವರ್ಷಗಳಿಂದ ತನಗೆ ಪರಿಚಯ ಇದ್ದು ಆತನು ಎಲ್.ಎಸ್.ಡಿ ಸ್ಟಾಂಪ್, ಗಾಂಜಾ, ಅಶೀಶ್ ಮತ್ತು ಇತರೆ ಮಾದಕವಸ್ತುಗಳನ್ನು ಅಕ್ರಮವಾಗಿ ಮಾರಾಟ ಮಾಡಿ ಹಣ ಗಳಿಸುತ್ತಿದ್ದು ಮತ್ತು ತಾನು ಹಣ ಗಳಿಸುವ ಉದ್ದೇಶದಿಂದ 3 ನೇ ಆರೋಪಿಯಿಂದ ಎಲ್.ಎಸ್.ಡಿ ಸ್ಟಾಂಪ್, ಗಾಂಜಾ, ಅಶೀಶ್ ನ್ನು ಆತನಿಂದ ಖರೀದಿ ಮಾಡಿ ಮಂಗಳೂರಿನ ಶಿವಭಾಗ್, ಕದ್ರಿ, ಮಲ್ಲಿಕಟ್ಟೆ ಹಾಗೂ ಇತರೆ ಪ್ರದೇಶಗಳಲ್ಲಿ ಈ ಮಾದಕವಸ್ತುಗಳನ್ನು

ಮಾರಾಟ ಮಾಡಿ ಹಣ ಗಳಿಸುವ ಉದ್ದೇಶದಿಂದ 3 ನೇ ಆರೋಪಿಯಿಂದ ತಾನು ಅಂಚೆ ಮೂಲಕ ಈ ಹಿಂದೆ ತಾನು ವಾಸವಾಗಿದ್ದ ಕದ್ರಿ ದೇವಸ್ಥಾನದ ಬಳಿ ಇರುವ ಸಿಟಡೆಲ್ ಅಪಾರ್ಟ್‌ಮೆಂಟ್ ನ 2A ಫ್ಲಾಟ್ ನಂಬರ್ ನ ವಿಳಾಸಕ್ಕೆ ತರಿಸಿಕೊಳ್ಳುತ್ತಿರುವುದಾಗಿ ಹೇಳಿರುತ್ತಾನೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 48 ಫ್ರಾಸಾ–9 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ವಿಳಾಸಕ್ಕೆ 3 ನೇ ಆರೋಪಿಯಿಂದ ಅಂಚೆ ಮೂಲಕ ಬರುವ ಮಾದಕವಸ್ತುಗಳನ್ನು ಆರೋಪಿಯಾದ ನೀವು ಸಿಟಡೆಲ್ ಅಪಾರ್ಟ್‌ಮೆಂಟ್ ನ ಸೆಕ್ಯೂರಿಟಿ ಗಾರ್ಡ್ ಗೆ ಮಾಹಿತಿ ನೀಡುವಂತೆ ಮೊದಲೇ ತಿಳಿಸಿದ್ದು, ಅದರಂತೆ ದಿ. 10.06.2021 ರಂದು ಸೆಕ್ಯೂರಿಟಿ ಗಾರ್ಡ್ ಇವರು ಅಂಚೆ ಮೂಲಕ ಒಂದು ಪಾರ್ಸಲ್ ಬಂದಿರುತ್ತದೆ ಎಂದು ತಿಳಿಸಿದರ ಮೇರೆಗೆ ನಂತರ 1 ನೇ ಆರೋಪಿಯಾದ ನೀವು ಸದರಿ ಪಾರ್ಸೆಲ್ ನ್ನು ಪೋಸ್ಟ್‌ಮೆನ್ ಯಿಂದ ಪಡೆದುಕೊಂಡು ನಂತರ ನೀವು ವಾಸ ಮಾಡುತ್ತಿದ್ದ ಸೂರಜ್ ರೆಬುಲಾ ಪಿ.ಜಿ ಗೆ ಹೋಗಿ ತೆಗೆದು ನೋಡಿದಾಗ ಅದರಲ್ಲಿ ಎಲ್.ಎಸ್.ಡಿ ಸ್ಟಾಂಪ್ ಗಳು ಇದ್ದು ಅವುಗಳನ್ನು ತನ್ನ ಟೀ ಶರ್ಟ್ ನ ಎಡ ಜೇಬಿನಲ್ಲಿ ಇಟ್ಟುಕೊಂಡು ತನ್ನ ಗಿರಾಕಿಗಳಿಗಾಗಿ ಕಾಯುತ್ತಿರುವುದಾಗಿ ತಿಳಿಸಿದ್ದು ಸದರಿ ಎಲ್.ಎಸ್.ಡಿ ಸ್ಟಾಂಪ್ ನ್ನು ಮಾರಾಟ ಮಾಡಲು ಲೈಸೆನ್ಸ್ ಇದೇಯಾ ಎಂದು ಕೇಳಲಾಗಿ ಲೈಸೆನ್ಸ್ ಇರುವುದಿಲ್ಲ ಎಂದು ಹೇಳಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 49 ಫ್ರಾಸಾ–9 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆಗ ತಾನು ಅಂಗ ಶೋಧನೆಯನ್ನು ಪತ್ರಾಂಕಿತ ಅಧಿಕಾರಿಗಳು ಮಾಡಬೇಕಾ ಅಥವಾ ಮ್ಯಾಜಿಸ್ಟ್ರೇಟ್ ಮಾಡಬೇಕಾ ಎಂದು ನಿಪಿ–19 ರಂತೆ ನೋಟಿಸನ್ನು ಇಂಗ್ಲೀಷ್ ಭಾಷೆಯಲ್ಲಿ ಕೊಟ್ಟಾಗ ತನ್ನ ಅಂಗ ಶೋಧನೆಯನ್ನು ಪತ್ರಾಂಕಿತ ಅಧಿಕಾರಿಯು ಮಾಡಬೇಕು ಎಂದು ಇಂಗ್ಲೀಷ್ ಭಾಷೆಯಲ್ಲಿ ಸದರಿ ನೋಟೀಸ್ ಮೇಲೆ ಬರೆದು ಕೊಟ್ಟಿದ್ದು, ಸದರಿ ನೋಟೀಸಿನಲ್ಲಿ ತನ್ನ ಸಹಿ ನಿಪಿ–19(ಎ) ಎಂದೂ ಹಾಗೂ 1 ನೇ ಆರೋಪಿಯಾದ ನಿಮ್ಮ ಸಹಿ ನಿಪಿ–19(ಬಿ) ರಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ

ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 50 ಫ್ರಾಸಾ–9 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಆರೋಪಿಯಾದ ನಿಮ್ಮ ಬೈಕ್ ನ್ನು ಸ್ಥಳದಲ್ಲಿಯೆ ಸಂಜೆ 4.00 ರಿಂದ 5.00 ಗಂಟೆಯವರೆಗೆ ನಿಪಿ–2 ರಂತೆ ಮಹಜರು ಮೂಲಕ ಅಮಾನತು ಪಡಿಸಿಕೊಂಡಿದ್ದು, ಅದರಲ್ಲಿ ತನ್ನ ಸಹಿ ನಿಪಿ–2(ಬಿ) ಹಾಗೂ 1 ನೇ ಆರೋಪಿಯಾದ ನಿಮ್ಮ ಸಹಿ ನಿಪಿ–2(ಸಿ) ರಂತೆ ಇರುತ್ತವೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 51 ಫ್ರಾಸಾ–9 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಬೈಕಿನ ನಾಲ್ಕು ಫೊಟೋಗಳನ್ನು ಒಟ್ಟಾಗಿ ನಿಪಿ–20 ಎಂದು ಗುರುತಿಸಿದ್ದು ಹಾಗೂ ನಿಪಿ–2 ನ್ನು ಚಾಸಾ–14 ರವರು 1 ನೇ ಆರೋಪಿಯಾದ ನಿಮಗೆ ಕನ್ನಡದಿಂದ ಮಲೆಯಾಳಂ ಭಾಷೆಗೆ ತರ್ಜುಮೆ ಮಾಡಿ ಹೇಳಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 52 ಫ್ರಾಸಾ–9 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಆರೋಪಿಯಾದ ನಿಮ್ಮನ್ನು ದಸ್ತಗಿರಿ ಮಾಡಿ, ದಸ್ತಗಿರಿ ಮಾಡಿದ ಬಗ್ಗೆ ನಿಮಗೆ ನಿಪಿ–21 ರಂತೆ ದಸ್ತಗಿರಿ ಜ್ಞಾಪನವನ್ನು ನೀಡಿದ್ದು, ಅದರಲ್ಲಿ ತನ್ನ ಸಹಿ ನಿಪಿ–21(ಎ) ಎಂದೂ ಆರೋಪಿಯಾದ ನಿಮ್ಮ ಸಹಿ ನಿಪಿ–21(ಬಿ) ರಂತೆ ಇರುತ್ತವೆ ಎಂದು ಗುರುತಿಸಿದ್ದು ಹಾಗೂ ದಸ್ತಗಿರಿಯ ಬಗ್ಗೆ ಆರೋಪಿಯ ಅಣ್ಣನಾದ ಹರ್ಷದ್ ಎನ್ನುವವರಿಗೆ ತಿಳಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 53 ಫ್ರಾಸಾ–9 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಸ್ಥಳದಲ್ಲಿಯೇ ಪತ್ರಾಂಕಿತ ಅಧಿಕಾರಿಗೆ ಪತ್ರವನ್ನು ತಯಾರಿಸಿಕೊಂಡು ತಾನು, 1 ನೇ ಆರೋಪಿ, ಪಂಚರು ಮತ್ತು ಸಿಬ್ಬಂದಿಗಳು ಸೇರಿ ಫ್ರಾಸಾ–4 ರವರ ಕಚೇರಿಗೆ ಹೋಗಿ ಸಂಜೆ 5.30 ಗಂಟೆಗೆ ನಿಪಿ–12 ರಂತೆ ಕೋರಿಕೆ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ತನ್ನ ಸಹಿ ನಿಪಿ–12(ಎ) ಯಂತೆ ಇರುತ್ತದೆ ಎಂದು ಗುರುತಿಸಿ

ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 54 ಫ್ರಾಸಾ–9 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆಗ ಫ್ರಾಸಾ–4 ರವರು ತನ್ನನ್ನು ಆರೋಪಿಯಾದ ನಿಮಗೆ ಪರಿಚಯ ಮಾಡಿಕೊಂಡು ತಾನು ಪತ್ರಾಂಕಿತ ಅಧಿಕಾರಿಯಾಗಿದ್ದು ಅಂಗ ಶೋಧನೆಯನ್ನು ಮಾಡಬಹುದಾ ಎಂದು 1ನೇ ಆರೋಪಿಯಾದ ನಿಮಗೆ ಕೇಳಿದ್ದು ಅದಕ್ಕೆ ನೀವು ಒಪ್ಪಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 55 ಫ್ರಾಸಾ–9 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಫ್ರಾಸಾ–4 ರವರು ಪರಿಶೀಲನೆ ಮಾಡುತ್ತಿರುವಾಗ 1ನೇ ಆರೋಪಿಯಾದ ನಿಮ್ಮ ಟೀ ಶರ್ಟ್ ನ ಎಡ ಕಿಸೆಯಲ್ಲಿ ಇದ್ದ ಪ್ಲಾಸ್ಟಿಕ್ ಕವರ್ ನ್ನು ತೆಗೆದು ನೋಡಿದಾಗ ಮೂರು ಹಾಳೆಯ ಎಲ್.ಎಸ್.ಡಿ ಸ್ಟಾಂಪ್ ಗಳು ಇರುವುದು ಕಂಡು ಬಂದಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 56 ಫ್ರಾಸಾ–9 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅವುಗಳಲ್ಲಿ ಮೊದಲನೆ ಹಾಳೆಯನ್ನು ತೆಗೆದು ನೋಡಿದಾಗ ಅದರಲ್ಲಿ ಶಿವನ ಚಿತ್ರ ಉಳ್ಳ 280 ಎಲ್.ಎಸ್.ಡಿ ಸ್ಟಾಂಪ್ ಗಳು ಇರುವುದು ಕಂಡು ಬಂದಿದ್ದು ಅವುಗಳನ್ನು ತೂಕ ಮಾಡಿದಾಗ 4.75 ಗ್ರಾಂ ಇದ್ದು ಮತ್ತು ಅವುಗಳಲ್ಲಿಯ ಒಂದೊಂದು ಎಲ್.ಎಸ್.ಡಿ ಸ್ಟಾಂಪ್ ನ ಉದ್ದಳತೆ 1 cm ಇದ್ದು ಮತ್ತು ಸದರಿ ಹಾಳೆಯ ಉದ್ದ ಮತ್ತು ಅಗಲ 18X12.5 cm ಆಗಿತ್ತು ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 57 ಫ್ರಾಸಾ–9 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಎರಡನೇ ಹಾಳೆಯನ್ನು ತೆಗೆದು ನೋಡಿದಾಗ ಅದರಲ್ಲಿ ಸೈಕಲ್ ಸವಾರಿ ಮಾಡುತ್ತಿರುವ ನಗ್ನ ಮಹಿಳೆಯ ಚಿತ್ರ ಇರುವ 420 ಎಲ್.ಎಸ್.ಡಿ ಸ್ಟಾಂಪ್ ಗಳು ಕಂಡು ಬಂದಿದ್ದು ಅವುಗಳನ್ನು ತೂಕ ಮಾಡಿದಾಗ 8.001 ಗ್ರಾಂ ಇದ್ದು, ಒಂದೊಂದು ಎಲ್.ಎಸ್.ಡಿ ಸ್ಟಾಂಪ್ ನ ಉದ್ದಳತೆ 0.8 cm ಹಾಗೂ ಸದರಿ ಹಾಳೆಯ ಉದ್ದ ಮತ್ತು ಅಗಲ 16X16.5 cm ಆಗಿತ್ತು ಎಂದು ನುಡಿದಿರುತ್ತಾರೆ. ಈ ಬಗ್ಗೆ

ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 58 ಫ್ರಾಸಾ–9 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಮೂರನೇ ಹಾಳೆಯನ್ನು ತೆಗೆದು ನೋಡಿದಾಗ ಅದರ ಮುಂಭಾಗದಲ್ಲಿ ಹೂ ಮತ್ತು ಎಲೆ ಇರುವ ಚಿತ್ರ ಮತ್ತು ಹಿಂಭಾಗದಲ್ಲಿ ಕಪ್ಪು ಮತ್ತು ಬಿಳಿ ಅಣುಗಳ ರೇಖಾಚಿತ್ರ ಇರುವ 140 ಎಲ್.ಎಸ್.ಡಿ ಸ್ಟಾಂಪ್ ಗಳು ಕಂಡು ಬಂದಿದ್ದು ಅವುಗಳನ್ನು ತೂಕ ಮಾಡಿದಾಗ 2.003 ಗ್ರಾಂ ಇದ್ದು ಒಂದೊಂದು ಎಲ್.ಎಸ್.ಡಿ ಸ್ಟಾಂಪ್ ನ ಉದ್ದಳತೆ 0.8 cm ಆಗಿತ್ತು ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 59 ಫ್ರಾಸಾ–9 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ 1 ನೇ ಆರೋಪಿಯಾದ ನಿಮ್ಮ ಹತ್ತಿರ ಒಟ್ಟು 15.015 ಗ್ರಾಂ ತೂಕದ 840 ಎಲ್. ಎಸ್.ಡಿ ಸ್ಟಾಂಪ್ ಗಳು ಇದ್ದು ಇವುಗಳೆಲ್ಲವನ್ನು ಫ್ರಾಸಾ–4 ರವರು ಬಿಳಿ ಬಟ್ಟೆಯಲ್ಲಿ ಹಾಕಿ ಹೊಲಿದು ಸಿಸಿಬಿ ಅರಗು ಸೀಲ್ ನ್ನು ಹಾಕಿ ಸೀಲ್ ಮಾಡಲಾಗಿದ್ದು ಮತ್ತು ತನ್ನ, ಪಂಚರ ಮತ್ತು ಫ್ರಾಸಾ–4 ರವರ ಸಹಿ ಇರುವ ಚೀಟಿ ಅಂಟಿಸಿ ಅದಕ್ಕೆ "A1" ಎಂದು ಗುರುತು ಸಂಖ್ಯೆಯನ್ನು ನೀಡಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 60 ಫ್ರಾಸಾ–9 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಫ್ರಾಸಾ–4 ರವರು 1 ನೇ ಆರೋಪಿಯಾದ ನೀವು ಧರಿಸಿದ್ದ ಹಾಫ್ ಪ್ಯಾಂಟ್ ನ ಬಲ ಕಿಸೆಯಿಂದ ಒಂದು ನೀಲಿ ಬಣ್ಣದ ಈಗಾಗಲೇ ಮು.ಮಾ–1 ಎಂದು ಗುರುತಿಸಿರುವ ರೆಡ್ಮೀ ನೋಟ್ 7 ಮೊಬೈಲ್ ನ್ನು ಹಾಜರುಪಡಿಸಿದ್ದು ಅದನ್ನು ಫ್ರಾಸಾ–4 ರವರು ತಮ್ಮ ಸಮಕ್ಷಮ ಪರಿಶೀಲಿಸಿದಾಗ ಅದರಲ್ಲಿ ಏರ್ಟೆಲ್ ಕಂಪನಿಯ ಸಿಮ್ ಇದ್ದು ಅದರ ನಂಬರ್ 6366296092 ಇರುವುದು ಕಂಡು ಬಂದಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 61 ಫ್ರಾಸಾ–9 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಮೊಬೈಲ್ ಮತ್ತು ಸಿಮ್ ಕಾರ್ಡ್ ನ್ನು envelope ಕವರ್ ನಲ್ಲಿ ಹಾಕಿ ಸಿಸಿಬಿ ಅರಗು ಸೀಲ್ ನ್ನು ಹಾಕಿ ಸೀಲ್ ಮಾಡಿ, ಅದಕ್ಕೆ ತನ್ನ, ಪಂಚರ ಮತ್ತು ಫ್ರಾಸಾ–4 ರವರ ಸಹಿ

ಇರುವ ಚೀಟಿ ಅಂಟಿಸಿ ಅದಕ್ಕೆ “A2” ಎಂದು ಗುರುತು ಸಂಖ್ಯೆಯನ್ನು ನೀಡಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 62 ಫ್ರಾಸಾ–9 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಫ್ರಾಸಾ–4 ರವರು 1 ನೇ ಆರೋಪಿಯಾದ ನೀವು ಧರಿಸಿದ್ದ ಹಾಫ್ ಪ್ಯಾಂಟ್ ನ ಎಡ ಕಿಸೆಯಿಂದ ಈಗಾಗಲೇ ಮು.ಮಾ–2 ಎಂದು ಗುರುತಿಸಿರುವ ಒಂದು ಕಪ್ಪು ಬಣ್ಣದ ನೋಕಿಯಾ ಕಂಪನಿಯ 1100 ಮೊಬೈಲನ್ನು ಹಾಜರುಪಡಿಸಿದ್ದು, ಸದರಿ ಮೊಬೈಲ್ ನ್ನು envelope ಕವರಿನಲ್ಲಿ ಹಾಕಿ ಸಿಸಿಬಿ ಅರಗು ಸೀಲ್ ನ್ನು ಹಾಕಿ ಸೀಲ್ ಮಾಡಿದ್ದು, ತನ್ನ, ಪಂಚರ ಮತ್ತು ಫ್ರಾಸಾ–4 ರವರ ಸಹಿ ಇರುವ ಚೀಟಿ ಅಂಟಿಸಿ ಅದಕ್ಕೆ “A3” ಎಂದು ಗುರುತು ಸಂಖ್ಯೆಯನ್ನು ನೀಡಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 63 ಫ್ರಾಸಾ–9 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಈ ಬಗ್ಗೆ ಫ್ರಾಸಾ–4 ರವರು ಸಂಜೆ 5.45 ರಿಂದ 6.45 ಗಂಟೆಯವರೆಗೆ ನಿಪಿ–3 ರಂತೆ ಮಹಜರನ್ನು ಜರುಗಿಸಿದ್ದು, ಅದರಲ್ಲಿ ತನ್ನ ಸಹಿ ನಿಪಿ–3(ಡಿ) ಯಂತೆ ಹಾಗೂ ಆರೋಪಿಯಾದ ನಿಮ್ಮ ಸಹಿಯನ್ನು ಈಗಾಗಲೇ ನಿಪಿ–3(ಸಿ) ಎಂದು ಗುರುತಿಸಿದ್ದು, ನಿಪಿ–3 ನ್ನು ಚಾಸಾ–14 ರವರು 1 ನೇ ಆರೋಪಿಯಾದ ನಿಮಗೆ ಕನ್ನಡದಿಂದ ಮಲೆಯಾಳಂ ಭಾಷೆಗೆ ತರ್ಜುಮೆ ಮಾಡಿ ಹೇಳಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 64 ಫ್ರಾಸಾ–9 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಆರೋಪಿಯಾದ ನಿಮ್ಮನ್ನು ಅಮಾನತುಪಡಿಸಿಕೊಂಡ ಬೈಕ್, ಎಲ್.ಎಸ್.ಡಿ ಸ್ಟಾಂಪ್ ಗಳು, ಎರಡು ಮೊಬೈಲ್ ಗಳು ಮತ್ತು ದಾಖಲೆಗಳೊಂದಿಗೆ ಕದ್ರಿ ಪೊಲೀಸ್ ಠಾಣೆಗೆ ಬಂದು ಸರಕಾರದ ಪರವಾಗಿ ಲಿಖಿತ ದೂರನ್ನು 1 ನೇ ಆರೋಪಿಯಾದ ನಿಮ್ಮ ವಿರುದ್ಧ ನಿಪಿ–22 ನೀಡಿದ್ದು, ಅದರಲ್ಲಿ ತನ್ನ ಸಹಿ ನಿಪಿ–22(ಎ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 65 ಫ್ರಾಸಾ–10 ಶ್ರೀ ರಾಹುಲ್ ಶೆಟ್ಟಿ ರವರು ತಮ್ಮ ಸಾಕ್ಷ್ಯದಲ್ಲಿ ನಿಪಿ–1 ರ

ದಾಖಲೆಗೆ ಪೊಲೀಸರು ತನ್ನ ಸಹಿ ನಿಪಿ–1(ಸಿ) ಯಂತೆ ಪಡೆದಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 66 ಫ್ರಾಸಾ–10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಿಪಿ–2 ಮತ್ತು ನಿಪಿ–3 ಕ್ಕೆ ತಾನು ಪೊಲೀಸ್ ಠಾಣೆಯಲ್ಲಿ ನಿಪಿ–2(ಡಿ) ಮತ್ತು ನಿಪಿ–3(ಇ) ರಂತೆ ಸಹಿ ಮಾಡಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 67 ಫ್ರಾಸಾ–10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಮು.ಮಾ–1 ಮತ್ತು 2 ರ ಕ್ಲಾತ್ ಮೊಲ್ಡೆಡ್ ಕವರುಗಳನ್ನು ಈಗಾಗಲೇ ನಿಪಿ–4 ಮತ್ತು 5 ಎಂದೂ ಗುರುತಿಸಿದ್ದು ಅವುಗಳ ಮೇಲೆ ತನ್ನ ಸಹಿ ನಿಪಿ–4(ಸಿ) ಮತ್ತು ನಿಪಿ–5(ಸಿ) ರಂತೆ ಇರುತ್ತವೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 68 ಫ್ರಾಸಾ–10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಈಗ ತೋರಿಸಿದ ಬಿಳಿ ಬಟ್ಟೆಯಲ್ಲಿ ಹೊಲಿದು ಅರಗು ಸೀಲ್ ಹಾಕಿದ ಪ್ಯಾಕೆಟ್ ನ ಮೇಲೆ ಅಂಟಿಸಿರುವ ನಿಪಿ–23 ರ ಚೀಟಿಯ ಮೇಲೆ ತನ್ನ ಸಹಿ ನಿಪಿ–23(ಎ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 69 ಫ್ರಾಸಾ–11 ಶ್ರೀ ಬ್ರಾಡ್ಲಿ ಕಿರಣ್ ನರೋನ್ಹ ರವರು ತಮ್ಮ ಸಾಕ್ಷ್ಯದಲ್ಲಿ ತಾನು 2018 ರಿಂದ 2022 ರವರೆಗೆ ಇಂಡಸ್ ಇಂಡ್ ಬ್ಯಾಂಕ್, ಪಿವಿಎಸ್ ಬ್ರಾಂಚ್, ಮಂಗಳೂರಿನಲ್ಲಿ ಬ್ರಾಂಚ್ ಮ್ಯಾನೇಜರ್ ಆಗಿ ಕರ್ತವ್ಯವನ್ನು ನಿರ್ವಹಿಸಿದ್ದು ದಿ. 22.06.2021 ರಂದು ಈ ಪ್ರಕರಣಕ್ಕೆ ಸಂಬಂಧಪಟ್ಟ ಮಂಗಳೂರು ಪೂರ್ವ ಪೊಲೀಸರು ಖಾತೆ ಸಂಖ್ಯೆ 100061838492 ಗೆ ಸಂಬಂಧಪಟ್ಟಂತೆ ಖಾತೆ ಹೊಂದಿರುವವರ ಹೆಸರು, ಬ್ಯಾಂಕ್ ಸ್ಟೇಟ್ ಮೆಂಟ್ ಮತ್ತು ಕೆ.ವೈ.ಸಿ ವಿವರಗಳನ್ನು ಕೇಳಿದ್ದರು ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 70 ಫ್ರಾಸಾ–11 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆ ಪ್ರಕಾರ ತಾನು ಸದರಿ ಖಾತೆಗೆ ಸಂಬಂಧಪಟ್ಟ E K.Y.C Report, Account Opening Form, Customer Acknowledgment Form, PAN Card, ದೃಢೀಕರಣ ಪತ್ರ ಹೊಂದಿರುವ ದಿ. 01.01.2020 ರಿಂದ 01.07.2021 ರವರೆಗಿನ ಬ್ಯಾಂಕಿನ ಖಾತಾ ವಿವರಗಳನ್ನು ದಿ. 03.07.2021 ರಂದು ಕೊಟ್ಟಿದ್ದು ಸದರಿ ದಾಖಲೆಗಳನ್ನು ನಿಪಿ–25 ರಿಂದ ನಿಪಿ–29 ಎಂದು ಗುರುತಿಸಿದ್ದು, ನಿಪಿ–29 ರ ಮೇಲೆ ತನ್ನ ಸಹಿ ನಿಪಿ–29(ಎ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 71 ಫ್ರಾಸಾ–11 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಿಪಿ–25 ರಿಂದ ನಿಪಿ–29 ನ್ನು ನಿಪಿ–30 ರ ಕವಚ ಪತ್ರದೊಂದಿಗೆ ಕೊಟ್ಟಿದ್ದು, ಅದರಲ್ಲಿ ತನ್ನ ಸಹಿ ನಿಪಿ–30(ಎ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 72 ಫ್ರಾಸಾ–11 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಖಾತೆಯು ಈ ಪ್ರಕರಣದಿಂದ ಬೇರ್ಪಡಿಸಲ್ಪಟ್ಟ 3 ನೇ ಆರೋಪಿಯಾದ ಅಶ್ವಿನ್ ಲೆಸ್ಟರ್ ಅಶೋಕ್ ಸರಾವೂ ಇವರ ಹೆಸರಿನಲ್ಲಿ ಇರುತ್ತದೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 73 ಫ್ರಾಸಾ–12 ಶ್ರೀ ಆನಂದ್ ಗೋನಾಲ್ ರವರು ತಮ್ಮ ಸಾಕ್ಷ್ಯದಲ್ಲಿ ತಾನು ಏಪ್ರಿಲ್ 2018 ರಿಂದ ಜೂನ್ 2021 ವರೆಗೆ ಮಂಗಳೂರು ಪೂರ್ವ ಪೊಲೀಸ್ ಠಾಣೆಯಲ್ಲಿ ಪಿ.ಸಿ ಆಗಿ ಕರ್ತವ್ಯ ಸಲ್ಲಿಸಿದ್ದು, ದಿ. 11.06.2021 ರಂದು ಚಾಸಾ–38 ರವರ ಆದೇಶದಂತೆ ಠಾಣೆಯಲ್ಲಿ 1 ನೇ ಆರೋಪಿಯಾದ ನಿಮ್ಮ ಮತ್ತು ನಿಮ್ಮ ಮೋಟಾರ್ ಸೈಕಲ್ ನಂಬರ್ KL–18/F–3859 ರ ಭಾವಚಿತ್ರವನ್ನು ತನ್ನ ರೆಡ್ಮಿ ನೋಟ್ 8 ಪ್ರೋ ಮೊಬೈಲ್ ನಲ್ಲಿ ತೆಗೆದಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 74 ಫ್ರಾಸಾ–12 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ತನ್ನ ಮೊಬೈಲ್

ನಿಂದ ಠಾಣೆಯಲ್ಲಿದ್ದ ಗಣಕಯಂತ್ರಕ್ಕೆ ಡೌನ್ಲೋಡ್ ಮಾಡಿ ಯಥಾವತ್ತಾಗಿ ಯಾವುದೇ ಬದಲಾವಣೆ ಮಾಡದೆ ಅವುಗಳ ಪ್ರಿಂಟ್ ನ್ನು ತೆಗೆದು ಸಿ.ಡಿ ಗೆ ವರ್ಗಾಯಿಸಿ ಫೊಟೋಗಳನ್ನು ಮತ್ತು ಸಿ.ಡಿ ಯನ್ನು ತನಿಖಾಧಿಕಾರಿಯವರಿಗೆ ನೀಡಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 75 ಫ್ರಾಸಾ-12 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಮೋಟಾರ್ ಸೈಕಲ್‌ನ ಫೊಟೋಗಳನ್ನು ಈಗಾಗಲೇ ನಿಪಿ-20 ಎಂದೂ ಹಾಗೂ ಸಿ.ಡಿ ಯನ್ನು ನಿಪಿ-20(ಎ) ಎಂದು ಗುರುತಿಸಿದ್ದು, ಈ ಬಗ್ಗೆ ತಾನು ನಿಪಿ-31 ರಂತೆ ದೃಢೀಕರಣ ಪತ್ರವನ್ನು ನೀಡಿದ್ದು, ಅದರಲ್ಲಿ ತನ್ನ ಸಹಿ ನಿಪಿ-31(ಎ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 76 ಫ್ರಾಸಾ-12 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ. 02.07.2021 ರಂದು ಚಾಸಾ-38 ರವರ ಜೊತೆಗೆ ಮಂಗಳೂರಿನ 6 ನೇ ಜೆ.ಎಂ.ಎಫ್.ಸಿ ನ್ಯಾಯಾಲಯಕ್ಕೆ inventory ಸಲುವಾಗಿ ಬೇಕಾಗಿರುವ ಸಲಕರಣೆಯೊಂದಿಗೆ ಹೋಗಿ ಈ ಪ್ರಕರಣದಲ್ಲಿ ಸ್ವಾಧೀನಪಡಿಸಿಕೊಂಡ ಮಾದಕವಸ್ತುಗಳ ಎರಡು ಪ್ಯಾಕೆಟ್‌ಗಳನ್ನು ಚಾಸಾ-38 ರವರು ನ್ಯಾಯಾಧೀಶರ ಮುಂದೆ A1 ಮತ್ತು A4 ಎಂದು ಗುರುತಿಸಿದ ಮಾದಕವಸ್ತು ಪ್ಯಾಕೆಟ್‌ಗಳನ್ನು inventory ಸಲುವಾಗಿ ಹಾಜರುಪಡಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 77 ಫ್ರಾಸಾ-12 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನ್ಯಾಯಾಧೀಶರ ಮುಂದೆ ಬಟ್ಟೆಯ ಪ್ಯಾಕೆಟ್ ನಲ್ಲಿ ಇದ್ದ ಸದರಿ A1 ನ್ನು ತೆಗೆದು ನೋಡಿದಾಗ ಅದರಲ್ಲಿ ಎಲ್.ಎಸ್.ಡಿ ಸ್ಟಾಂಪ್ ಗಳು ಇದ್ದು ಅವುಗಳನ್ನು ತೂಕ ಮಾಡಿದಾಗ 15.05 ಗ್ರಾಂ ಆಗಿತ್ತು ಹಾಗೆಯೇ ಬಟ್ಟೆಯ ಪ್ಯಾಕೆಟ್ ನಲ್ಲಿ ಇದ್ದ ಸದರಿ A4 ನ್ನು ತೆಗೆದು ನೋಡಿದಾಗ ಅದರಲ್ಲಿ ಗಾಂಜಾ ಇದ್ದು ಅದನ್ನು ಬಟ್ಟೆ ಸಮೇತ ತೂಕ ಮಾಡಿದಾಗ 48 ಗ್ರಾಂ ಇತ್ತು ಮತ್ತು ಬಟ್ಟೆ ಹೊರತಾಗಿ ತೂಕ ಮಾಡಿದಾಗ 26 ಗ್ರಾಂ ಇತ್ತು ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 78 ಫ್ರಾಸಾ–12 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಸದರಿ ಎಲ್.ಎಸ್.ಡಿ ಸ್ಟಾಂಪ್ ಗಳನ್ನು ಬಟ್ಟೆಯಲ್ಲಿ ಹಾಕಿ ಹೊಲಿದು ಅದಕ್ಕೆ ಅರಗು ಸೀಲ್ ನ್ನು ಹಾಕಿದ್ದು ಅದಕ್ಕೆ ನ್ಯಾಯಾಧೀಶರು B ಎಂದು ಗುರುತು ಸಂಖ್ಯೆಯನ್ನು ನೀಡಿದ್ದು ನಂತರ ಸದರಿ ಗಾಂಜಾವನ್ನು ಬಟ್ಟೆಯಲ್ಲಿ ಹಾಕಿ ಹೊಲಿದು ಅದಕ್ಕೆ ಅರಗು ಸೀಲ್ ನ್ನು ಹಾಕಿದ್ದು ಅದಕ್ಕೆ ನ್ಯಾಯಾಧೀಶರು C ಎಂದು ಗುರುತು ಸಂಖ್ಯೆಯನ್ನು ನೀಡಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 79 ಫ್ರಾಸಾ–12 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಪ್ಯಾಕೆಟ್ ಗಳಿಗೆ ನ್ಯಾಯಾಧೀಶರ ಸಹಿ ಮತ್ತು ಸೀಲು ಇರುವ ಚೀಟಿಯನ್ನು ಅಂಟಿಸಿದ್ದು ಮತ್ತು ಅವುಗಳ ಮೇಲೆ B ಮತ್ತು C ಎಂದು ಗುರುತು ಸಂಖ್ಯೆಗಳನ್ನು ನೀಡಿದ್ದು ನಂತರ ಸದರಿ ಪ್ಯಾಕೆಟ್ ಗಳನ್ನು ನ್ಯಾಯಾಧೀಶರು ತನಿಖಾಧಿಕಾರಿ ಚಾಸಾ–38 ರವರಿಗೆ FSL ಗೆ ಕಳುಹಿಸುವ ಸಲುವಾಗಿ ಹಸ್ತಾಂತರಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 80 ಫ್ರಾಸಾ–12 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆ ಸಮಯದಲ್ಲಿ ಚಾಸಾ–38 ರವರ ಆದೇಶದಂತೆ ತನ್ನ ಸದರಿ ಮೊಬೈಲ್ ನಲ್ಲಿ 12 ಫೊಟೋಗಳನ್ನು ತೆಗೆದಿದ್ದು, ನಂತರ ತನ್ನ ಸದರಿ ಮೊಬೈಲ್ ನಿಂದ ಠಾಣೆಯಲ್ಲಿದ್ದ ಗಣಕಯಂತ್ರಕ್ಕೆ ಡೌನ್ಲೋಡ್ ಮಾಡಿ ಯಥಾವತ್ತಾಗಿ ಯಾವುದೇ ಬದಲಾವಣೆ ಮಾಡದೆ ಅವುಗಳ ಪ್ರಿಂಟ್ ನ್ನು ತೆಗೆದು ಸಿ.ಡಿ ಗೆ ವರ್ಗಾಯಿಸಿ ಪೊಟೋಗಳನ್ನು ಮತ್ತು ಸಿ.ಡಿ ಯನ್ನು ತನಿಖಾಧಿಕಾರಿಯವರಿಗೆ ನೀಡಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 81 ಫ್ರಾಸಾ–12 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಫೊಟೋಗಳನ್ನು ಒಟ್ಟಾಗಿ ನಿಪಿ–32 ಎಂದೂ ಹಾಗೂ ಸದರಿ ಸಿ.ಡಿ ಯನ್ನು ನಿಪಿ–32(ಎ) ಎಂದು ಗುರುತಿಸಿದ್ದು, ಈ ಬಗ್ಗೆ ತಾನು ನಿಪಿ–33 ರಂತೆ ದೃಢೀಕರಣ ಪತ್ರವನ್ನು ನೀಡಿದ್ದು, ಅದರಲ್ಲಿ ತನ್ನ ಸಹಿ ನಿಪಿ–33(ಎ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 82 ಫ್ರಾಸಾ–13 ಡಾ. ಶ್ರೀನಾಥ್ ಬಿ ಎಸ್ ರವರು ತಮ್ಮ ಸಾಕ್ಷ್ಯದಲ್ಲಿ ತಾನು ದಿಃ 6.03.2014 ರಿಂದ 31.08.2025 ಇಲ್ಲಿಯವರೆಗೆ ಹಿರಿಯ ವೈಜ್ಞಾನಿಕ ಅಧಿಕಾರಿಯಾಗಿ FSL ಮಡಿವಾಳ ಬೆಂಗಳೂರಿನಲ್ಲಿ ಕರ್ತವ್ಯವನ್ನು ನಿರ್ವಹಿಸಿದ್ದು, ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಿ. 5.07.2021 ರಂದು ಮಂಗಳೂರು ಪೂರ್ವ ಪೊಲೀಸ್ ಠಾಣೆಗೆ ಸಂಬಂಧಪಟ್ಟ ಕ್ರೈಂ ನಂಬರ್ 81/2021 ರಲ್ಲಿ ಒಂದು ಸೀಲ್ ಆದ ವಸ್ತುವನ್ನು ಚಾಸಾ–31 ಅವರು ನಮ್ಮ ನೊಂದಣಿ ವಿಭಾಗಕ್ಕೆ ತಂದು ನೀಡಿದ್ದನ್ನು ಸ್ವೀಕರಿಸಿ ತಮ್ಮ ರಾಸಾಯನಿಕ ವಿಭಾಗಕ್ಕೆ ಅದೇ ದಿನ ನೀಡಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 83 ಫ್ರಾಸಾ–13 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ 25.10.2021 ರಂದು ತಾನು ಆ ಸದರಿ ಸೀಲ್ ಆದ ವಸ್ತುವನ್ನು ಸ್ವೀಕರಿಸಿ ನೋಡಿದಾಗ ಅದರ ಮೇಲಿದ್ದ ಸೀಲು ಸುಸ್ಥಿತಿಯಲ್ಲಿ ಇತ್ತು ಮತ್ತು ಅದು ತನಿಖಾಧಿಕಾರಿಯು ಕಳುಹಿಸಿದ ಮಾದರಿ ಸೀಲಾದ JUDICIAL MAGISTRATE FIRST CLASS COURT MANGALURU D.K. ನೊಂದಿಗೆ ಹೋಲಿಕೆ ಆಗುತ್ತಿತ್ತು ಮತ್ತು ಅದನ್ನು JMFC 6 ನೇ ನ್ಯಾಯಾಲಯದ ನ್ಯಾಯಾಧೀಶರು ಅಟೆಸ್ಟ್ ಮಾಡಿದ್ದರು ಮತ್ತು ಅದರ ಮೇಲೆ Article B ಎಂದು ಗುರುತು ಸಂಖ್ಯೆಯನ್ನು ನೀಡಿದ್ದು ಅದರ ಮೇಲೆ ಎರಡು ಚೀಟಿಗಳನ್ನು ಅಂಟಿಸಿದ್ದು ಒಂದರಲ್ಲಿ JMFC 6 ನೇ ನ್ಯಾಯಾಲಯದ ನ್ಯಾಯಾಧೀಶರ ಸಹಿ ಇತ್ತು, ಮತ್ತೊಂದರಲ್ಲಿ ಎ.ಸಿ.ಪಿ. ಸಬ್ ಡಿವಿಜನ್ ಸೆಂಟ್ರಲ್ ಮಂಗಳೂರವರು ಸಹಿ ಇತ್ತು ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 84 ಫ್ರಾಸಾ–13 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಬಿಳಿ ಬಣ್ಣದ ಬಟ್ಟೆಯ ಪ್ಯಾಕೆಟ್ ನ್ನು ತೆಗೆದು ನೋಡಿದಾಗ ಅದರಲ್ಲಿ 840 ಚೌಕಕಾರದ ವಿವಿಧ ಅಳತೆಯುಳ್ಳ ಪೇಪರ್ ಸ್ಟಾಂಪ್ ಗಳು ಇದ್ದು, ಸದರಿ ಸ್ಟಾಂಪ್ ಗಳ ಮೇಲೆ ಒಬ್ಬ ವ್ಯಕ್ತಿಯು ಕುಳಿತು ಸೈಕಲ್ ತುಳಿಯುವ ರೀತಿಯಲ್ಲಿ ಹಾಗೂ ಕೆಲವು ಸ್ಟಾಂಪ್ ಗಳ ಮೇಲೆ ಶಿವ ಮತ್ತು ಗಣೇಶ ಇವರ ಚಿತ್ರಗಳುಳ್ಳ ಪ್ರಿಂಟೆಂಡ್ ಡಿಸೈನ್

ನ ಪೇಪರ್ ಸ್ಟಾಂಪ್ ಗಳು ಇದ್ದು, ಎಲ್ಲಾ ಸ್ಟಾಂಪ್ ಗಳ ಮಧ್ಯದಲ್ಲಿ there are dotted cuttings between the stamp stripes ಇದ್ದು, ಆ ವಸ್ತುಗಳನ್ನು sampling ಪದ್ಧತಿಯಲ್ಲಿ ಒಂದೊಂದು ಡಿಸೈನ್ ಯುಳ್ಳ ಹತ್ತತ್ತು ಸ್ಟಾಂಪ್ ಗಳನ್ನು ಮೆತನಾಲ್ ದ್ರಾವಣದಿಂದ ತೊಳೆದು ಅವುಗಳನ್ನು ಕೆಳಗೆ ನಮೂದಿಸಿದ ಪರೀಕ್ಷೆಗೆ ದಿಃ 25.10.2021 ರಿಂದ 20.12.2021 ರವರೆಗೆ ಒಳಪಡಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 85 ಫ್ರಾಸಾ–13 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ವಸ್ತುವನ್ನು ತಾನು 1. Ehrlich reagent test, 2. UV Spectrophotometric analysis, 3. Thin layer Chromatography Test, 4. High performance thin later chromatography, 5. Fourier transform infrared spectroscopic analysis ಮತ್ತು 6. Gas Chromatography Mass Spectrometric analysis ಪರೀಕ್ಷೆಗೆ ಒಳಪಡಿಸಿದಾಗ ವಸ್ತು ಸಂಖ್ಯೆ Article–B ರಲ್ಲಿ Lysergic acid diethylamide (LSD) ಇರುವುದು ಕಂಡು ಬಂದಿದ್ದು ಅದು ಭ್ರಮಕಾರಕ ಮಾದಕ ವಸ್ತುವಾಗಿರುತ್ತದೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 86 ಫ್ರಾಸಾ–13 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಪರೀಕ್ಷೆಯ ನಂತರ ಉಳಿದ ಸದರಿ ವಸ್ತುವನ್ನು ಅದೇ ಪ್ಯಾಕೆಟ್ ನಲ್ಲಿ ಪ್ಯಾಕ್ ಮಾಡಿ ಸೀಲ್ ಮಾಡಿದ್ದು ಪರೀಕ್ಷೆಯ ನಂತರ ನಿಪಿ–34 ರಂತೆ ವರದಿಯನ್ನು ಕೊಟ್ಟಿದ್ದು, ಅದರಲ್ಲಿ ತನ್ನ ಸಹಿ ನಿಪಿ–34(ಎ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 87 ಫ್ರಾಸಾ–13 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಪರೀಕ್ಷೆಯ ನಂತರ ಸದರಿ ವಸ್ತುವನ್ನು ಅದೇ ಪ್ಯಾಕೆಟಿಗೆ ಮರು ಪ್ಯಾಕ್ ಮಾಡಿ ಅದರ ಮೇಲೆ ತಮ್ಮ ಕಚೇರಿಯ NSFSL ಬೆಂಗಳೂರು ಎಂಬ ಮೊಹರಿನೊಂದಿಗೆ ಸಂಬಂಧಪಟ್ಟ

ಪೊಲೀಸರಿಗೆ ಕಳುಹಿಸಿಕೊಟ್ಟಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 88 ಫ್ರಾಸಾ–13 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಿಪಿ–34 ರ ಜೊತೆ ಮಾದರಿ ಸೀಲನ್ನು ಕೊಡಲಾಗಿದ್ದು ಅದನ್ನು ನಿಪಿ–35 ಎಂದು, ಸೀಲ್ ಇಂಪ್ರೆಶನ್ ನ್ನು ನಿಪಿ–35(ಎ) ಎಂದು ಮತ್ತು ಅದರಲ್ಲಿ ತನ್ನ ಸಹಿ ನಿಪಿ–35(ಬಿ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 89 ಫ್ರಾಸಾ–13 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ NSFSL ಬೆಂಗಳೂರು ಎಂದು ಇರುವ ಸೀಲು ನಮ್ಮ ಕಚೇರಿಯ ಸೀಲು ಆಗಿದ್ದು ಸದರಿ ಪ್ಯಾಕೆಟ್ ಗೆ ಅಂಟಿಸಿರುವ JMFC 6 ನೇ ನ್ಯಾಯಾಲಯದ ನ್ಯಾಯಾಧೀಶರು ಸಹಿ ಇರುವ ಮತ್ತು Article B ಎಂದು ನಮೂದು ಮಾಡಿರುವುದಕ್ಕೆ ತಾನು NS/60/21 ಎಂದು ಬರೆದಿದ್ದು ಅದು ತಮ್ಮ ವಿಭಾಗದ ನೊಂದಣಿ ನಂಬರ್ ಆಗಿದ್ದು ಸದರಿ ಚೀಟಿಯನ್ನು ನಿಪಿ–36 ಎಂದು ಹಾಗೂ ಇನ್ನೊಂದು ಚೀಟಿಯ ಮೇಲೆ ತನ್ನ ಸಹಿ ಇದ್ದು ಸದರಿ ಚೀಟಿಯನ್ನು ಈಗಾಗಲೇ ನಿಪಿ–23 ಎಂದು ಗುರುತಿಸಿದ್ದು, ಅದರಲ್ಲಿ ತನ್ನ ಸಹಿ ನಿಪಿ–23(ಬಿ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 90 ಫ್ರಾಸಾ–13 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಪರೀಕ್ಷೆ ಮಾಡಿದ ಸದರಿ ಒಬ್ಬ ವ್ಯಕ್ತಿಯು ಕುಳಿತು ಸೈಕಲ್ ತುಳಿಯುವ ರೀತಿಯಲ್ಲಿ ಹಾಗೂ ಶಿವ ಇವರ ಚಿತ್ರಗಳುಳ್ಳ ಪ್ರಿಂಟೆಂಡ್ ಡಿಸೈನ್ ನ ಪೇಪರ್ ಸ್ಟಾಂಪ್ ಗಳನ್ನು ಒಟ್ಟಾಗಿ ಮು.ಮಾ.–4 ಎಂದು ಗುರುತಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 91 ಫ್ರಾಸಾ–13 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ತಾನು ನಿಪಿ–34 ರಲ್ಲಿ ನಮೂದಿಸಿದ sampling UNODC (United Nations Of ofifce on Drugs and Crime) Manual ಪ್ರಕಾರ sampling

procedure ಅನು ಅಳವಡಿಸಿಕೊಂಡು ಎಲ್ಲಾ ಪರೀಕ್ಷೆಗಳನ್ನು ಮಾಡಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 92 ಫ್ರಾಸಾ–14 ಶ್ರೀ ಕೆ. ರಾಮಲಿಂಗಯ್ಯ ರವರು ತಮ್ಮ ಸಾಕ್ಷ್ಯದಲ್ಲಿ ತಾನು 2019 ರಿಂದ ಸೆಪ್ಟಂಬರ್ 2021 ರವರೆಗೆ ಬೆಂಗಳೂರು Foreign Post office ಚಾಮರಾಜಪೇಟೆ, ಬೆಂಗಳೂರು ಇಲ್ಲಿ Superintendent ಆಗಿ ಕೆಲಸ ಮಾಡಿದ್ದು ದಿಃ 19.06.2021 ರಂದು ಮಂಗಳೂರು ಪೂರ್ವ ಪೊಲೀಸ್ ಠಾಣೆಯಿಂದ ಒಂದು ವಿದೇಶಿ ನೊಂದಣಿ ಅಂಚೆ ಪತ್ರದ ಬಗ್ಗೆ ತಮಗೆ ಮಾಹಿತಿಯನ್ನು ಕೇಳಿ ಅದರ ಜೊತೆಗೆ ಒಂದು ನೊಂದಣಿ ಅಂಚೆಯ ಜೆರಾಕ್ಸ್ ಪ್ರತಿಯನ್ನು ಕಳುಹಿಸಿದ್ದು, ಸದರಿ ಪತ್ರವನ್ನು ನಿಪಿ–37 ಎಂದು ಹಾಗೂ ಸದರಿ ನೊಂದಣಿ ಅಂಚೆಯ ಜೆರಾಕ್ಸ್ ಪ್ರತಿಯನ್ನು ನಿಪಿ–38 ಎಂದು ಗುರುತಿರು ವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 93 ಫ್ರಾಸಾ–14 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಿಪಿ–37 ಕ್ಕೆ ತಾನು ಇಮೇಲ್ ಮೂಲಕ ಅದೇ ದಿನ ಉತ್ತರವನ್ನು ಕಳುಹಿಸಿದ್ದು ಸದರಿ ಇಮೇಲ್ ನ್ನು ನೋಡುತ್ತಿದ್ದು ಅದನ್ನು ನಿಪಿ–39 ಹಾಗೂ ಅದರಲ್ಲಿ ತನ್ನ ಸಹಿ ನಿಪಿ–39(ಎ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 94 ಫ್ರಾಸಾ–14 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ತಾನು ದಿಃ 18.08.2021 ರಂದು ನಿಪಿ–37 ಕ್ಕೆ ವಿವರವಾದ ಉತ್ತರವನ್ನು ನಿಪಿ–40 ರಂತೆ ಕೊಟ್ಟಿದ್ದು, ಅದರಲ್ಲಿ ತನ್ನ ಸಹಿ ನಿಪಿ–40(ಎ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 95 ಫ್ರಾಸಾ–14 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಿಪಿ–38 ಫ್ರಾನ್ಸ್ ದೇಶದಿಂದ ಬಂದಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 96 ಫ್ರಾಸಾ–15 ಜಗನ್ನಾಥ ಕೆ. ರವರು ತಮ್ಮ ಸಾಕ್ಷ್ಯದಲ್ಲಿ ತಾನು 2020 ರಿಂದ 2022 ವರೆಗೆ ಮಂಗಳೂರು ಪೂರ್ವ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿದ್ದು, ದಿ. 10.06.2021 ರಂದು ಸಂಜೆ 7.30 ಗಂಟೆಗೆ ಫ್ರಾಸಾ–9 ರವರು ಠಾಣೆಗೆ ಬಂದು ನೀಡಿದ ನಿಪಿ–22 ದೂರನ್ನು, ಆರೋಪಿತನನ್ನು, ಸ್ವತ್ತು ಮತ್ತು ದಾಖಲೆಗಳನ್ನು ಠಾಣೆಗೆ ಹಾಜರುಪಡಿಸಿದ್ದು ಅವುಗಳ ಆಧಾರದ ಮೇಲೆ ಠಾಣಾ ಮೊಕದ್ದಮೆ ನಂ.81/2021 ರಂತೆ ಕಲಂ 8(c), 21(c) of NDPS Act ಪ್ರಕರಣ ದಾಖಲಿಸಿ ಚಾಸಾ–30 ರವರ ಮುಖಾಂತರ ನಿಪಿ–41 ರಂತೆ ಪ್ರ.ವ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿದ್ದು, ಅದರಲ್ಲಿ ತನ್ನ ಸಹಿ ನಿಪಿ–41(ಎ) ಹಾಗೂ ನಿಪಿ–22 ರ ಮೇಲೆ ತನ್ನ ಸಹಿ ನಿಪಿ–22(ಬಿ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 97 ಫ್ರಾಸಾ–15 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಹಾಜರುಪಡಿಸಿದ ಸ್ವತ್ತನ್ನು ಮಾಲು ನಿಪಿ–42 ರಂತೆ ಪಟ್ಟಿ ಸಂ. 65/21 ರಲ್ಲಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದು ಅದರಲ್ಲಿ ತನ್ನ ಸಹಿ ನಿಪಿ–42(ಎ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 98 ಫ್ರಾಸಾ–15 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ 1 ನೇ ಆರೋಪಿಯಾದ ನಿಮ್ಮನ್ನು ಮತ್ತು ಕಡತವನ್ನು ಚಾಸಾ–38 ರವರಿಗೆ ಮುಂದಿನ ತನಿಖೆಗಾಗಿ ಹಸ್ತಾಂತರಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 99 ಫ್ರಾಸಾ–16 ಮಹೇಶ್ ಎಸ್. ರವರು ತಮ್ಮ ಸಾಕ್ಷ್ಯದಲ್ಲಿ ತಾನು 2017 ರಿಂದ 2021 ರವರೆಗೆ ಮಂಗಳೂರು ಪೂರ್ವ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯವನ್ನು ನಿರ್ವಹಿಸಿದ್ದು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಿಃ 4.07.2021 ರಂದು ಚಾಸಾ–38 ರವರು ಈ ಪ್ರಕರಣದ ಸ್ವತ್ತುಗಳಾದ ಎಲ್.ಎಸ್.ಡಿ. ಎಂದು ಬರೆದ ಪ್ಯಾಕ್ ಮತ್ತು ಸೀಲು ಮಾಡಿದ ಸ್ವತ್ತನ್ನು FSL ಬೆಂಗಳೂರಿಗೆ ತಲುಪಿಸಬೇಕೆಂದು ಆದೇಶ ಮಾಡಿದ್ದರ ಮೇರೆಗೆ ಆ ಪ್ರಕಾರ

ತಾನು ದಿಃ 5.07.2021 ರಂದು ಸದರಿ ಸ್ವತ್ತುಗಳನ್ನು FSL ಬೆಂಗಳೂರಿಗೆ ತಲುಪಿಸಿ ನಿಪಿ 43 ರಂತೆ ಸ್ವೀಕೃತಿ ಪತ್ರವನ್ನು ಪಡೆದುಕೊಂಡು ಚಾಸಾ–38 ರವರ ಮುಂದೆ ಹಾಜರುಪಡಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 100 ಫ್ರಾಸಾ–17 ಲೋಕೇಶ್ ಎ.ಸಿ ರವರು ತಮ್ಮ ಸಾಕ್ಷ್ಯದಲ್ಲಿ ತಾನು ದಿ. 19.07.2019 ರಿಂದ ದಿ. 28.04.2022 ವರೆಗೆ ಮಂಗಳೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಪೊಲೀಸ್ ನಿರೀಕ್ಷಕನಾಗಿ ಕರ್ತವ್ಯವನ್ನು ನಿರ್ವಹಿಸಿದ್ದು, ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಿ. 16.06.2021 ರಂದು ಚಾಸಾ–38 ರವರು ತುರ್ತು ಕೆಲಸದ ಮೇಲೆ ಗೌರವಾನ್ವಿತ ಉಚ್ಚ ನ್ಯಾಯಾಲಯಕ್ಕೆ ಬೆಂಗಳೂರಿಗೆ ಹೋಗಬೇಕಾಗಿದ್ದರಿಂದ ಅವರು ತನಗೆ ಠಾಣೆಯ ಪ್ರಭಾರವನ್ನು ಅದೇ ದಿನ ನನಗೆ ವಹಿಸಿಕೊಟ್ಟಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 101 ಫ್ರಾಸಾ–17 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಈ ಪ್ರಕರಣದ ಕಡತವನ್ನು ಅದೇ ದಿನ ಪಡೆದುಕೊಂಡು ತನಿಖೆಯನ್ನು ಮುಂದುವರೆಸಿದ್ದು ದಿಃ 15.06.2021 ರಂದು ಚಾಸಾ–38 ರವರು ಚಾಸಾ–22 ರವರಿಗೆ ಈ ಪ್ರಕರಣದಿಂದ ಬೇರ್ಪಡಿಸಲ್ಪಟ್ಟ 2 ನೇ ಆರೋಪಿಯನ್ನು ವಶಕ್ಕೆ ಪಡೆದು ಹಾಜರುಪಡಿಸುವಂತೆ ಆದೇಶಿಸಿದ್ದ ಮೇರೆಗೆ ದಿಃ 16.06.2021 ರಂದು ಬೆಳಗ್ಗೆ 1.20 ಗಂಟೆಗೆ 2 ನೇ ಆರೋಪಿಯನ್ನು ತನ್ನ ಮುಂದೆ ನಿಪಿ–44 ರಂತೆ ವರದಿಯೊಂದಿಗೆ ಹಾಜರುಪಡಿಸಿದ್ದು, ಅದರಲ್ಲಿ ತನ್ನ ಸಹಿ ನಿಪಿ–44(ಎ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 102 ಫ್ರಾಸಾ–17 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಈ ಪ್ರಕರಣದಿಂದ ಬೇರ್ಪಡಿಸಲ್ಪಟ್ಟ 2 ನೇ ಆರೋಪಿಯನ್ನು ಈ ಪ್ರಕರಣದ ಬಗ್ಗೆ ಕುಲಂಕುಷವಾಗಿ ವಿಚಾರಿಸಿದ್ದು ಆಗ ಆತನು ಈ ಪ್ರಕರಣದಲ್ಲಿ ಭಾಗಿಯಾದ ಬಗ್ಗೆ ಒಪ್ಪಿಕೊಂಡ ಮೇರೆಗೆ ಆತನನ್ನು ದಸ್ತಗಿರಿ ಮಾಡಿ ಸ್ವಇಚ್ಛಾ ಹೇಳಿಕೆ

ದಾಖಲಿಸಿಕೊಂಡಿದ್ದು, 2 ನೇ ಆರೋಪಿ ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ ತಾನು 1 ಮತ್ತು 3 ನೇ ಆರೋಪಿತರೊಂದಿಗೆ ಮಾದಕ ವಸ್ತು ಖರೀದಿ ಸಂಬಂಧ ವ್ಯವಹಾರ ನಡೆಸುತ್ತಿದ್ದ ಮೊಬೈಲ್ ಫೋನ್ ಹಾಗೂ ಸ್ವಲ್ಪ ಅಂಶದ ಗಾಂಜಾವನ್ನು ತನ್ನ ಮನೆಯಲ್ಲಿ ಇಟ್ಟಿದ್ದು ತನ್ನ ಜೊತೆಯಲ್ಲಿ ಬಂದಲ್ಲಿ ತೆಗೆದು ಹಾಜರುಪಡಿಸುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 103 ಫ್ರಾಸಾ–17 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಹೇಳಿಕೆಯನ್ನು ನಿಪಿ–45 ರಂತೆ ಬೆಳಗ್ಗೆ 9 ಗಂಟೆಯಿಂದ 11 ಗಂಟೆಯವರೆಗೆ ತೆಗೆದುಕೊಂಡಿದ್ದು, ಸಂಬಂಧಪಟ್ಟ ಭಾಗವನ್ನು ನಿಪಿ–45(ಎ) ಎಂದು, ಅದರಲ್ಲಿ ತನ್ನ ಸಹಿ ನಿಪಿ–45(ಬಿ)ಮತ್ತು ಈ ಪ್ರಕರಣದಿಂದ ಬೇರ್ಪಡಿಸಲ್ಪಟ್ಟ 2 ನೇ ಆರೋಪಿಯ ಸಹಿ ನಿಪಿ–45(ಸಿ) ಯಂತೆ ಇರುತ್ತವೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 104 ಫ್ರಾಸಾ–17 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಅದೇ ದಿನ ಈ ಪ್ರಕರಣದಿಂದ ಬೇರ್ಪಡಿಸಲ್ಪಟ್ಟ 2 ನೇ ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಮುಂದಿನ ತನಿಖೆಗೆ ಕಡತವನ್ನು ಚಾಸಾ–38 ರವರಿಗೆ ವಹಿಸಿಕೊಟ್ಟಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 105 ಫ್ರಾಸಾ–18 ಡಾ. ಗಿರೀಶ ಕೆ.ಎಸ್. ರವರು ತಮ್ಮ ಸಾಕ್ಷ್ಯದಲ್ಲಿ ತಾನು ಮಾರ್ಚ್ 2022 ರಿಂದ ಅಕ್ಟೋಬರ್ 2025 ರವರೆಗೆ ಮಂಗಳೂರಿನ RFSL ನಲ್ಲಿ ಹಿರಿಯ ವೈಜ್ಞಾನಿಕ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಈ ಕೇಸಿಗೆ ಸಂಬಂಧಿಸಿದಂತೆ ದಿನಾಂಕ 9.07.2021 ರಂದು ಒಂದು ಸೀಲು ಮಾಡಿದ ಒಂದು ಬಟ್ಟೆಯ ಪ್ಯಾಕೆಟ್‌ನ್ನು ಹಾಗೂ ಅದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಚಾಸಾ–26 ಇವರ ಮೂಲಕ ತಮ್ಮ ಕಚೇರಿಯಲ್ಲಿ ಸ್ವೀಕರಿಸಿದ್ದು, ಅದನ್ನು ದಿನಾಂಕ 1.02.2022 ರಿಂದ ಪರೀಕ್ಷೆಗೆ ಒಳಪಡಿಸಿದ್ದು ಪ್ರತಿಯೊಂದು Article ಗಳ ಮೇಲೆ ನ್ಯಾಯಾಲಯದ ಅರಗು ಸೀಲು ಇದ್ದು ತನಿಖಾಧಿಕಾರಿ ಕಳುಹಿಸಿದ್ದ ಮಾದರಿಯ ಮೊಹರಿನೊಂದಿಗೆ ತಾಳೆಯಾಗುತ್ತಿತ್ತು ಮತ್ತು ಅದನ್ನು ತನಿಖಾಧಿಕಾರಿಯು C ಎಂದು ಗುರುತಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ

ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 106 ಫ್ರಾಸಾ–18 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ C ಬಟ್ಟೆಯ ಪ್ಯಾಕೆಟನ್ನು ತೆರೆದು ನೋಡಿದಾಗ ಅದರಲ್ಲಿ ಗಿಡದ ಒಣಗಿದ ಭಾಗಗಳಾದ ಗೆಲ್ಲು, ಹಸಿರು ಎಲೆಗಳು, ಮೊಗ್ಗು, ಹೂವು ಹಾಗೂ ಬೀಜದಿಂದ ಕೂಡಿದ್ದು ನಿರ್ದಿಷ್ಟ ವಾಸನೆ ಹೊಂದಿದ್ದು ಅದನ್ನು ತೂಕ ಮಾಡಲಾಗಿ 31.79 ಗ್ರಾಂ ನಷ್ಟು ಇತ್ತು ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 107 ಫ್ರಾಸಾ–18 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದನ್ನು ವಿವಿಧ ರಾಸಾಯನಿಕ ಪರೀಕ್ಷೆಗಳಿಗೆ ಅಂದರೆ Microscoping characteristics, Para aminophenol test, High Performance Thin Layer Chromatography ಒಳಪಡಿಸಿದಾಗ C ನಲ್ಲಿ ಗಾಂಜಾ ಇರುವುದು ಖಚಿತವಾಗಿದ್ದು, ಗಾಂಜಾ ಮನೋವಿದ್ರಾವಕ ವಸ್ತುವಾಗಿರುತ್ತದೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 108 ಫ್ರಾಸಾ–18 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ C ನ್ನು ಪರೀಕ್ಷೆಯ ನಂತರ ತೂಕ ಮಾಡಿದಾಗ 26.03 ಗ್ರಾಂ ನಷ್ಟು ಇತ್ತು. ಅದನ್ನು ಅದೇ ಬಟ್ಟೆ ಚೀಲದಲ್ಲಿ ಹಾಕಿ ಕಚೇರಿಯ ಮೊಹರಿನಿಂದ ಸೀಲು ಮಾಡಿ ತನಿಖಾಧಿಕಾರಿಯವರಿಗೆ ವರದಿಯೊಂದಿಗೆ ನೀಡಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 109 ಫ್ರಾಸಾ–18 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 4.02.2022 ರಂದು ನಿಪಿ–46 ರಂತೆ ವರದಿಯನ್ನು ಕಚೇರಿಯ ಮಾದರಿಯ ಮೊಹರಿನೊಂದಿಗೆ ಹಾಗೂ ಸೀಲು ಮಾಡಿದ ವಸ್ತುಗಳನ್ನು ತನಿಖಾಧಿಕಾರಿಯವರಿಗೆ ನೀಡಿದ್ದು, ಅದರಲ್ಲಿ ತನ್ನ ಎರಡು ಸಹಿಗಳು ನಿಪಿ–46(ಎ) ಮತ್ತು 46(ಬಿ) ರಂತೆ ಇರುತ್ತವೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 110 ಫ್ರಾಸಾ–18 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಮಾದರಿ ಮೊಹರನ್ನು ನಿಪಿ–47 ಎಂದು, Seal impression ನ್ನು ನಿಪಿ–47(ಎ) ಹಾಗೂ ಅದರಲ್ಲಿ ತನ್ನ ಸಹಿ ನಿಪಿ–47(ಬಿ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 100 ಫ್ರಾಸಾ–18 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಪ್ಯಾಕೆಟ್ ನಲ್ಲಿ ಇದ್ದ ವಸ್ತುವನ್ನು ತಾನು ಪರೀಕ್ಷಿಸಿದ ನಂತರ ತನಿಖಾಧಿಕಾರಿಗೆ ಕಳುಹಿಸಿಕೊಟ್ಟ ಗಾಂಜಾವಾಗಿದ್ದು, ಅದನ್ನು ಮುದ್ದೆ ಮಾಲು – 5 ಎಂದು ಗುರುತಿಸಿದ್ದು ಸದರಿ ಬಟ್ಟೆಯ ಪ್ಯಾಕೆಟ್ ನಲ್ಲಿರುವ C ಎಂದು ಬರೆದಿರುವ ನ್ಯಾಯಾಧೀಶರು ಸಹಿ ಮಾಡಿದ ಚೀಟಿಯನ್ನು ನಿಪಿ–48 ಎಂದು, ಸಾಕ್ಷಿಯ ಸಹಿಯನ್ನು ನಿಪಿ–48(ಎ) ಎಂದು ಗುರುತಿಸಿದ್ದು ಸದರಿ ಬಟ್ಟೆಯ ಪ್ಯಾಕೆಟ್ ನಲ್ಲಿರುವ C ಎಂದು ಬರೆದಿರುವ ತನಿಖಾಧಿಕಾರಿಯವರು ಸಹಿ ಮಾಡಿದ ಚೀಟಿಯನ್ನು ನಿಪಿ–49 ಎಂದು ಗುರುತಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 111 ಫ್ರಾಸಾ–19 ಶ್ರೀ ಪ್ರಖ್ಯಾತ್ ಕುಮಾರ್ ಶೆಟ್ಟಿ ರವರು ತಮ್ಮ ಸಾಕ್ಷ್ಯದಲ್ಲಿ ತಾನು ಮೇ 2019 ರಿಂದ ಡಿಸೆಂಬರ್ 2021 ರವರೆಗೆ ಐ.ಸಿ.ಐ.ಸಿ.ಐ ಬ್ಯಾಂಕ್ ಪಿ.ಎಂ. ರಸ್ತೆ ಬ್ರಾಂಚ್, ಮಂಗಳೂರಿನಲ್ಲಿ ಡೆಪ್ಯೂಟಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದು ದಿ. 01.07.2021 ರಂದು ಈ ಪ್ರಕರಣಕ್ಕೆ ಸಂಬಂಧಪಟ್ಟ ಮಂಗಳೂರು ಪೂರ್ವ ಪೊಲೀಸರು ಖಾತೆ ಸಂಖ್ಯೆ 007201030793 ಗೆ ಸಂಬಂಧಪಟ್ಟಂತೆ ಸ್ಟೇಟ್‌ಮೆಂಟ್ ಮತ್ತು ಕೆ.ವೈ.ಸಿ ದಾಖಲೆಗಳನ್ನು ಕೇಳಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 112 ಫ್ರಾಸಾ–19 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆ ಪ್ರಕಾರ ಅದೇ ನಾನು ದಿ. 01.01.2020 ರಿಂದ ದಿ. 30.06.2021 ರವರೆಗಿನ ಬ್ಯಾಂಕಿನ ಸದರಿ ಖಾತೆಗೆ ಸಂಬಂಧಪಟ್ಟ ವಿವರಗಳನ್ನು ಕೊಟ್ಟಿದ್ದು, ಸದರಿ ಖಾತೆಯ 18 ಹಾಳೆಗಳ ಸ್ಟೇಟ್‌ಮೆಂಟ್ ನ್ನು ನಿಪಿ–50 ಎಂದು, ಪ್ರತಿ ಪುಟದಲ್ಲಿ ಇರುವ ತನ್ನ ಸಹಿಗಳನ್ನು ಒಟ್ಟಾಗಿ ನಿಪಿ–50(ಎ), ಹಾಗೆಯೇ ಸದರಿ ಖಾತೆದಾರನ ಆಧಾರ್

ಕಾರ್ಡ್ ಪ್ರತಿಯನ್ನು ನಿಪಿ–51 ಎಂದು ಹಾಗೂ ಅದರಲ್ಲಿ ತನ್ನ ಸಹಿ ನಿಪಿ–51(ಎ) ರಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 113 ಫ್ರಾಸಾ–19 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಖಾತೆಗೆ ಮೊಬೈಲ್ ನಂಬರ್ 9008434345 ಅಟ್ಯಾಚ್ ಆಗಿದ್ದು Google pay ಗೂ ಕೂಡ ಅದೇ ಸಂಖ್ಯೆ ಅಟ್ಯಾಚ್ ಆಗಿತ್ತು ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 114 ಫ್ರಾಸಾ–20 ಶ್ರೀ ಸವಿತ್ರ ತೇಜ್ ಪಿ.ಡಿ ರವರು ತಮ್ಮ ಸಾಕ್ಷ್ಯದಲ್ಲಿ ತಾನು ಜುಲೈ 2020 ರಿಂದ ಫೆಬ್ರವರಿ 2022 ರವರೆಗೆ ಮಂಗಳೂರು ಪೂರ್ವ ಪೊಲೀಸ್ ಠಾಣೆಯಲ್ಲಿ ಪೊಲೀಸ್ ನಿರೀಕ್ಷಕನಾಗಿ ಕರ್ತವ್ಯವನ್ನು ನಿರ್ವಹಿಸಿದ್ದು ಈ ಪ್ರಕರಣದ ಕಡತವನ್ನು ದಿಃ 10.06.2021 ರಂದು ಫ್ರಾಸಾ–15 ರವರಿಂದ ಪಡೆದುಕೊಂಡು ಅಲ್ಲಿಯವರೆಗಿನ ತನಿಖೆಯನ್ನು ಪರಿಶೀಲಿಸಿ, ಅದೇ ದಿನ ಪ್ರಕರಣದಲ್ಲಿ ದಸ್ತಗಿರಿಯಾಗಿದ್ದ 1 ನೇ ಆರೋಪಿಯಾದ ನಿಮ್ಮನ್ನು ವಿಚಾರಿಸಿ ನಿಮ್ಮ ಸ್ವ ಇಚ್ಚಾ ಹೇಳಿಕೆಯನ್ನು ನಿಪಿ–52 ರಂತೆ ರಾತ್ರಿ 9 ಗಂಟೆಯಿಂದ 10.30 ಗಂಟೆಯವರೆಗೆ ಪಡೆದುಕೊಂಡಿದ್ದು, 1 ನೇ ಆರೋಪಿಯಾದ ನೀವು ಮಲಯಾಳಿ ಭಾಷೆಯಲ್ಲಿ ಹೇಳಿದ್ದನ್ನು ಚಾಸಾ–27 ರವರು ಕನ್ನಡಕ್ಕೆ ತರ್ಜುಮೆ ಮಾಡಿದ್ದನ್ನು ಬೆರಳಚ್ಚು ಮಾಡಿಸಿದ್ದು, ಅದರಲ್ಲಿ ತನ್ನ ಸಹಿ ನಿಪಿ–52(ಎ) ಯಂತೆ ಹಾಗೂ 1 ನೇ ಆರೋಪಿಯಾದ ನಿಮ್ಮ ಸಹಿ ನಿಪಿ–52(ಬಿ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 115 ಫ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ 1 ನೇ ಆರೋಪಿಯಾದ ನೀವು ತನ್ನ ಸ್ವ ಇಚ್ಚಾ ಹೇಳಿಕೆಯಲ್ಲಿ ಅಂಚೆ ಮುಖಾಂತರ ಎಲ್.ಎಸ್.ಡಿ. ಬಂದ ಕವರನ್ನು ತಾನು ಉಳಿದಕೊಳ್ಳುವ ರೂಂ ನಲ್ಲಿ ಇಟ್ಟಿದ್ದು ತನ್ನ ಜೊತೆಗೆ ಬಂದರೆ ಸದರಿ ಕವರನ್ನು ತೋರಿಸಿ ತೆಗೆದುಕೊಡುತ್ತೇನೆ ಎಂದು ಹೇಳಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 116 ಫ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ 11.06.2021 ರಂದು 1 ನೇ ಆರೋಪಿಯಾದ ನಿಮ್ಮನ್ನು ಕೋವಿಡ್ ತಪಾಸಣೆಗೆ ಒಳಪಡಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಅದೇ ದಿನ ನ್ಯಾಯಾಲಯಕ್ಕೆ 1 ನೇ ಆರೋಪಿಯಾದ ನಿಮ್ಮನ್ನು ತನಿಖೆಗಾಗಿ ಪೊಲೀಸ್ ಬಂಧನಕ್ಕೆ ಕೇಳಿದ್ದು ನ್ಯಾಯಾಲಯವು ಅದೇ ದಿನ 10 ದಿನಗಳ ಕಾಲ ಪೊಲೀಸ್ ಬಂಧನಕ್ಕೆ ನೀಡಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 117 ಫ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಅದೇ ದಿನ 1 ನೇ ಆರೋಪಿಯಾದ ನೀವು ಕೃತ್ಯಕ್ಕೆ ಉಪಯೋಗಿಸಿದ ಮೋಟಾರ್ ಸೈಕಲ್ ನಂ.ಕೆಎಲ್–18–ಎಫ್–3859 ರ ಛಾಯ ಚಿತ್ರವನ್ನು ತೆಗೆದ ಫ್ರಾಸಾ–12 ರವರಿಂದ 65 ಬಿ ಪ್ರಮಾಣ ಪತ್ರವನ್ನು ನಿಪಿ–31 ರಂತೆ ಪಡೆದು ಕಡತಕ್ಕೆ ಅಳವಡಿಸಿಕೊಂಡಿದ್ದು ಅದರಲ್ಲಿ ತನ್ನ ಸಹಿ ನಿಪಿ–31(ಬಿ) ಯಂತೆ ಇರುತ್ತದೆ ಎಂದು ಗುರುತಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 118 ಫ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಬೈಕ್ ನ್ನು ಮುದ್ದೆ ಮಾಲು 6 ಎಂದು ಗುರುತಿಸಿದ್ದು ಹಾಗೂ ಮೋಟಾರ್ ಸೈಕಲ್ ನ ಪೋಟೋಗಳನ್ನು ಒಟ್ಟಾಗಿ ಹಾಗೂ ಸದರಿ ಪೋಟೋಗಳ ಸಿಡಿಯನ್ನು ಈಗಾಗಲೇ ನಿಪಿ–20 ಮತ್ತು ನಿಪಿ–20(ಎ) ಎಂದು ಗುರುತಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 119 ಫ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಅದೇ ದಿನ ನಿಪಿ–53 ರಂತೆ ಕಲಂ 57 ಎನ್.ಡಿ.ಪಿ.ಎಸ್. ರಡಿ ವರದಿಯನ್ನು ಪೊಲೀಸ್ ಆಯುಕ್ತರು ಮಂಗಳೂರು ಇವರಿಗೆ ಸಲ್ಲಿಸಿದ್ದು ನಂತರ ಅದೇ ದಿನ ಫ್ರಾಸಾ–1 ಮತ್ತು 10 ರವರ ಹೇಳಿಕೆಗಳನ್ನು ತೆಗೆದುಕೊಂಡಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 120 ಫ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ 12.06.2021 ರಂದು 1 ನೇ ಆರೋಪಿಯಾದ ನೀವು ತನ್ನ ಸ್ವ ಇಚ್ಛಾ ಹೇಳಿಕೆಯಲ್ಲಿ ಹೇಳಿದಂತೆ ತನ್ನನ್ನು, ತಮ್ಮ ಸಿಬ್ಬಂದಿರವರೊಂದಿಗೆ ಬೆಳಗ್ಗೆ 9 ಗಂಟೆಗೆ ಕದ್ರಿ ಕಂಬಳ ರಸ್ತೆಯ ಸುರಜ್ ರೆಬೆಲೊ ರವರ ಡೋರ್ ಸಂ.3–ಡಬ್ಲ್ಯೂ–3–163/1 & 2 ಪಿ.ಜಿ. ಕಟ್ಟಡದ 2 ನೇ ಮಹಡಿಗೆ ಕರೆದುಕೊಂಡು ಹೋಗಿದ್ದು ರೂಂ.15 ನ್ನು ತೋರಿಸಿ ಇದೇ ರೂಂನಲ್ಲಿ ತಾನು ವಾಸವಾಗಿದ್ದು ಅಲ್ಲಿಯೇ ಎಲ್.ಎಸ್.ಡಿ. ತರಿಸಿದ ಖಾಲಿ ಅಂಚೆ ಕವರ್ ಇಟ್ಟಿರುವುದಾಗಿ ಹೇಳಿರುತ್ತಾನೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 121 ಫ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಸದರಿ ಸ್ಥಳಕ್ಕೆ ಪಂಚರಾದ ಫ್ರಾಸಾ–3 ಮತ್ತು ಚಾಸಾ–6 ರವರನ್ನು ಬರಮಾಡಿಕೊಂಡು ಅವರಿಗೆ ಪ್ರಕರಣದ ಬಗ್ಗೆ ಮಾಹಿತಿಯನ್ನು ತಿಳಿಸಿ 1 ನೇ ಆರೋಪಿಯಾದ ನೀವು ಬಾಗಿಲನ ಹಿಂದೆ ಇಟ್ಟಿದ್ದ ಕೀ ಮೂಲಕ ಬಾಗಿಲಿನ ಬೀಗ ತೆರೆದಿದ್ದು 1 ನೇ ಆರೋಪಿಯಾದ ನೀವು ಮುಂದಾಗಿ ಒಳಗಡೆ ಹೋಗಿ ಉತ್ತರದ ಗೋಡೆಗೆ ತಾಗಿ ಸಣ್ಣ ಟಿಪಾಯಿ ಇದ್ದು ಅದರ ಮೇಲ್ಗಡೆಯಿಂದ ಸಣ್ಣ ಅಂಚೆ ಕವರ್ ನ್ನು ತೆಗೆದು ಅದೇ ಕವರ್ ನಲ್ಲಿ ಅಂಚೆ ಮೂಲಕ ಎಲ್.ಎಸ್.ಡಿ. ಬಂದಿರುವುದಾಗಿ ಹೇಳಿ ಅದನ್ನು ಹಾಜರುಪಡಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 122 ಫ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಎಲ್.ಎಸ್.ಡಿ. ಕವರನ್ನು ತೆಗೆದುಕೊಂಡು ಕುಲಂಕುಷವಾಗಿ ಪರಿಶೀಲಿಸಿದಾಗ ಅದರ ಮೇಲೆ Mr. Ajinas V.M., S/o Mr. Asif V.M., A/2, Citadel Apartment, Kadri temple road, Mallikatte, Kadri, Mangaluru – 575002, D.K. Karnataka Tel. +91–9473647816 India and LAPOSTE LB 148954145FR ಎಂಬ ಸ್ಟಿಕರ್ ಅಂಟಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು

ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 123 ಫ್ರಾಸಾ-20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಕವರ್ ಗೆ ಕಾಕಿ ಬಣ್ಣದ ಟೇಪ್ ಅಂಟಿಸಿ ಬಂದ್ ಮಾಡಿದ್ದು ಕಂಡು ಬಂದಿದ್ದು ಸದರಿ ಕವರ್ ನ್ನು ಒಂದು ಕಾಕಿ ಕವರ್ ನಲ್ಲಿ ಹಾಕಿ ಭದ್ರಪಡಿಸಿ 'ಇ' ಎಂಬ ಅರಗು ಸೀಲು ಮಾಡಿ ಪಂಚರ ಮತ್ತು ತನಿಖಾಧಿಕಾರಿಯ ಸಹಿ ಇರುವ ಚೀಟಿಯನ್ನು ಅಂಟಿಸಿ CVR ಎಂಬುವುದಾಗಿ ನಿಶಾನೆ ನೀಡಿ ಮುಂದಿನ ಕ್ರಮದ ಬಗ್ಗೆ ಬೆಳಗ್ಗೆ 9.30 ಗಂಟೆಯಿಂದ 10.30 ಗಂಟೆಯವರೆಗೆ ನಿಪಿ-11 ರಂತೆ ಮಹಜರು ಮೂಲಕ ಅಮಾನತ್ತುಪಡಿಸಿಕೊಂಡಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 124 ಫ್ರಾಸಾ-20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಮಹಜರನ್ನು ಲ್ಯಾಪ್ ಟಾಪ್ ಮೂಲಕ ಬೆರಳಚ್ಚು ಮಾಡಿ ಲೇಸರ್ ಪ್ರಿಂಟರ್ ಮೂಲಕ ಪ್ರಿಂಟ್ ನ್ನು ತೆಗೆದಿದ್ದು, ಅದರಲ್ಲಿ ತನ್ನ ಸಹಿ ನಿಪಿ-11(ಬಿ) ಯಂತೆ ಹಾಗೂ 1 ನೇ ಆರೋಪಿಯಾದ ನಿಮ್ಮ ಸಹಿ ನಿಪಿ-11(ಸಿ)ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 125 ಫ್ರಾಸಾ-20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಅಂಚೆ ಕವರನ್ನು ಈಗಾಗಲೇ ನಿಪಿ-8 ಎಂದು ಹಾಗೂ ಸದರಿ ಕಾಕಿ ಕವರನ್ನು ಈಗಾಗಲೇ ನಿಪಿ-9 ಎಂದು ಗುರುತಿಸಿದ್ದು, ಸದರಿ ಕಾಕಿ ಕವರ್ ನ ಮೇಲೆ ಅಂಟಿಸಿದ ಚೀಟಿಯ ಮೇಲೆ ತನ್ನ ಮತ್ತು ಪಂಚರ ಸಹಿ ಇದ್ದು ಅದನ್ನು ಈಗಾಗಲೇ ನಿಪಿ-10 ಎಂದು ಗುರುತಿಸಿದ್ದು, ಅದರಲ್ಲಿ ತನ್ನ ಸಹಿ ನಿಪಿ-10(ಬಿ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 126 ಫ್ರಾಸಾ-20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ವಶಪಡಿಸಿಕೊಂಡ ಸ್ವತ್ತನ್ನು ನಿಪಿ-54 ರಂತೆ ಸ್ವತ್ತು ಪಟ್ಟಿಯಲ್ಲಿ ಅಳವಡಿಸಿ

ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಅದರಲ್ಲಿ ತನ್ನ ಸಹಿ ನಿಪಿ-54(ಎ) ಯಂತೆ ಇರುತ್ತದೆ ಎಂದು ಗುರುತಿಸಿದ್ದು, ನಂತರ ಸಾಕ್ಷಿದಾರರಾದ ಪ್ರಾಸಾ-3 ಮತ್ತು ಚಾಸಾ-6 ರವರ ಹೇಳಿಕೆಯನ್ನು ಪಡೆದುಕೊಂಡಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 127 ಪ್ರಾಸಾ-20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ದಿಃ 13.06.2021 ರಂದು ಪ್ರಾಸಾ-2, ಚಾಸಾ-14, ಚಾಸಾ-15, ಚಾಸಾ-18, ಚಾಸಾ-17, ಚಾಸಾ-16, ಚಾಸಾ-19, ಚಾಸಾ-20, ಚಾಸಾ-21 ರವರ ಸಾಕ್ಷಿ ಹೇಳಿಕೆಯನ್ನು ಪಡೆದುಕೊಂಡಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 128 ಪ್ರಾಸಾ-20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ 15.06.2021 ರಂದು ದಿಃ 10.06.2021 ರಂದು ಮಹಜರು ಮೂಲಕ ಸ್ವಾಧೀನಪಡಿಸಿದ ಸ್ವತ್ತನ್ನು ತಜ್ಞರ ಪರೀಕ್ಷೆಗೆ ಕಳುಹಿಸುವ ಸಲುವಾಗಿ ನ್ಯಾಯಾಲಯಕ್ಕೆ inventory ಮಾಡಲು ಸತ್ರ ನ್ಯಾಯಾಲಯಕ್ಕೆ ಕೋರಿಕೆ ಪತ್ರವನ್ನು ಸಲ್ಲಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 129 ಪ್ರಾಸಾ-20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಅದೇ ದಿನ ಪೂರ್ವ ಠಾಣಾ ಅಪರಾಧ ಸಂ.43/2021 ರ ಕುರಿತಾಗಿ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ತೆರಳಿದ ಕಾರಣ ಕಡತವನ್ನು ಪ್ರಾಸಾ-17 ರವರಿಗೆ ವಹಿಸಿಕೊಟ್ಟಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 130 ಪ್ರಾಸಾ-20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ 20.06.2021 ರಂದು ಠಾಣೆಗೆ ವಾಪಾಸ್ ಬಂದು ಪ್ರಾಸಾ-17 ರವರಿಂದ ತನಿಖೆಯನ್ನು ವಹಿಸಿಕೊಂಡಿದ್ದು, ಅದೇ ದಿನ ಪೊಲೀಸ್ ಬಂಧನದಲ್ಲಿದ್ದ 1 ನೇ ಆರೋಪಿ ಯಾದ ನಿಮ್ಮನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಅದೇ ದಿನ

ಚಾಸಾ–23 ರಿಂದ 25 ರವರ ಸಾಕ್ಷಿ ಹೇಳಿಕೆಯನ್ನು ಪಡೆದಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 131 ಫ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ 21.06.2021 ರಂದು ಫ್ರಾಸಾ–17 ರವರ ಮುಂದೆ ಹಾಜರುಪಡಿಸಲಾಗಿದ್ದ ಈ ಪ್ರಕರಣದಿಂದ ಬೇರ್ಪಡಿಸಲ್ಪಟ್ಟ 2 ನೇ ಆರೋಪಿ ಉಮೇಶ್ ಪ್ರೀತಮ್ ಪ್ರಕಾಶ್ ಪೊಲೀಸ್ ಅಭಿರಕ್ಷೆಯಲ್ಲಿದ್ದು, ಆತನು ನಿಪಿ–45 ರಂತೆ ತನ್ನ ಸ್ವ ಇಚ್ಛಾ ಹೇಳಿಕೆಯನ್ನು ಕೊಟ್ಟಿದ್ದುರುವುದಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 132 ಫ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಈ ಬಗ್ಗೆ ಚಾಸಾ–28 ರವರು ಹುಬ್ಬಳ್ಳಿಗೆ ತೆರಳಿ ಈ ಪ್ರಕರಣದಿಂದ ಬೇರ್ಪಡಿಸಲ್ಪಟ್ಟ 2 ನೇ ಆರೋಪಿ ತೋರಿಸಿದಂತೆ ತನಿಖೆಯನ್ನು ನಡೆಸಿ ಸ್ವತ್ತನ್ನು ಹಾಜರುಪಡಿಸುವಂತೆ ನಿಪಿ–55 ರಂತೆ ಜ್ಞಾಪನವನ್ನು ನೀಡಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 133 ಫ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಅದೇ ದಿನ ಮ್ಯಾನೆಜರ್, ಇಂಡಸ್‌ಇಂಡ್ ಬ್ಯಾಂಕ್, ಪಿ.ವಿ.ಎಸ್. ಶಾಖೆ ಮಂಗಳೂರು ರವರಿಗೆ ಖಾತೆ ಸಂ.100061838492 ಇದರ ವ್ಯವಹಾರಗಳ ಸ್ಟೇಟ್ ಮೆಂಟ್ ನ್ನು ಹಾಗೂ ಇತರೆ ವಿವರಗಳನ್ನು ನೀಡುವಂತೆ ಕೋರಿಕೆ ಪತ್ರವನ್ನು ಸಲ್ಲಿಸಿದ್ದು ಹಾಗೂ ಮ್ಯಾನೆಜರ್, ಐ.ಸಿ.ಐ.ಸಿ.ಐ. ಬ್ಯಾಂಕ್, ಪಿ.ಎಂ. ರಸ್ತೆ, ಮಂಗಳೂರು ರವರಿಗೆ ಖಾತೆ ಸಂ.xxxxxxx0793 ಈ ಪ್ರಕರಣದಿಂದ ಬೇರ್ಪಡಿಸಲ್ಪಟ್ಟ ಆರೋಪಿ ಸಂ.2 ಈತನ ವ್ಯವಹಾರಗಳ ಸ್ಟೇಟ್ ಮೆಂಟ್ ನ್ನು ಹಾಗೂ ಇತರೆ ವಿವರಗಳನ್ನು ನೀಡುವಂತೆ ಕೋರಿಕೆ ಪತ್ರವನ್ನು ಸಲ್ಲಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 134 ಫ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಅದೇ ದಿನ Superintendent of Post, Foreign Post Office,

Chamarajapete, Bengaluru ಇವರಿಗೆ ಮಂಗಳೂರು ಕಂಕನಾಡಿ ಅಂಚೆ ಕಚೇರಿಯಿಂದ ಬಟವಾಡಿ ಆಗಿರುವ ಫ್ರಾನ್ಸ್ ಇಂಟರ್ ನ್ಯಾಷನಲ್ ಎಂಬ ಹೆಸರಿನ 4 ಸ್ಟಾಂಪ್ ಇದ್ದ Mr. Ajinas V.M., S/o Mr. Asif V.M., A/2, Citadel Apartment, Kadri temple road, Mallikatte, Kadri, Mangaluru – 575002, D.K. Karnataka Tel. +91-9473647816 India and LAPOSTE LB 148954145FR ಎಂಬ ಕುರಿತಾಗಿ ಮಾಹಿತಿಯನ್ನು ಕೋರಿದ್ದು, ಅಂದರೆ ಅಂಚೆ ಪಾರ್ಸಲ್ ಎಲ್ಲಿಂದ ಬಂದಿರುತ್ತದೆ, ಅಂಚೆ ಕಚೇರಿಯಲ್ಲಿ ಸ್ವೀಕರಿಸಿದ ಮತ್ತು ರವಾನಿಸಿದ ವಿವರ ಮತ್ತು ಇನ್ನಿತರ ಮಾಹಿತಿಯನ್ನು ಇಮೇಲ್ ಮೂಲಕ ಕೋರಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 135 ಫ್ರಾಸಾ-20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ 22.06.2021 ರಂದು ಹಿರಿಯ ಅಂಚೆ ಅಧೀಕ್ಷಕರು, ಮಂಗಳೂರು ವಿಭಾಗದವರಿಂದ ಎಲ್.ಎಸ್.ಡಿ. ಇದ್ದ ಅಂಚೆ ಪತ್ರವನ್ನು ಯಾರಿಗೆ ನೀಡಿದ್ದರ ಕುರಿತಾಗಿ ವಿವರವನ್ನು ಅಂಚೆ ಮೂಲಕ ಸ್ವೀಕರಿಸಿದ್ದು, ಸದರಿ ದಾಖಲೆಯನ್ನು ಈಗಾಗಲೇ ನಿಪಿ-16 ಮತ್ತು 17 ಎಂದು ಗುರುತಿಸಿದ್ದು, ನಿಪಿ-17 ರ ಮೇಲೆ ತನ್ನ ಸಹಿ ನಿಪಿ-17(ಬಿ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 136 ಫ್ರಾಸಾ-20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ 23.06.2021 ರಂದು ಈ ಪ್ರಕರಣದಿಂದ ಬೇರ್ಪಡಿಸಲ್ಪಟ್ಟ 2 ನೇ ಆರೋಪಿಯ ಮನೆಯಾದ ಹುಬ್ಬಳ್ಳಿಗೆ ತೆರಳಿದ ಚಾಸಾ-28 ರವರು 2 ನೇ ಆರೋಪಿ ಮತ್ತು ಸಿಬ್ಬಂದಿಯೊಂದಿಗೆ ಹಾಜರಾಗಿ ಅಲ್ಲಿ ತಯಾರಿಸಿದ ಸ್ವತ್ತು ಸ್ವಾಧೀನತಾ ಮಹಜರನ್ನು, ಗಾಂಜಾವನ್ನು, ನಿಪಿ-56 ರಂತೆ ವರದಿ ಹಾಗೂ ಇತರೆ ದಾಖಲೆಯೊಂದಿಗೆ ಹಾಜರುಪಡಿಸಿದ್ದನ್ನು ಸ್ವೀಕರಿಸಿದ್ದು, ಸ್ವೀಕೃತಿಯ ಮೇಲೆ ತನ್ನ ಸಹಿ ನಿಪಿ-56(ಎ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ

ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 137 ಫ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸ್ವತ್ತು ಸ್ವಾಧೀನತಾ ಮಹಜರನ್ನು ಈಗಾಗಲೇ ನಿಪಿ–13 ಎಂದು ಹಾಗೂ ಅದರಲ್ಲಿ ತನ್ನ ಸಹಿ ನಿಪಿ–13(ಬಿ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 138 ಫ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ವಶಪಡಿಸಿಕೊಂಡು ಬಂದಿದ್ದ ಸ್ವತ್ತಿನ ಬಗ್ಗೆ ನ್ಯಾಯಾಲಯಕ್ಕೆ ನಿಪಿ–57 ರಂತೆ ಮಾಲುಪಟ್ಟಿಯನ್ನು ಸಲ್ಲಿಸಿದ್ದು, ಅದರಲ್ಲಿ ತನ್ನ ಸಹಿ ನಿಪಿ–57(ಎ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 139 ಫ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ 24.06.2021 ರಂದು ಚಾಸಾ–8, ಚಾಸಾ–7, ಚಾಸಾ–30, ಚಾಸಾ–26, ಚಾಸಾ–27 ರವರ ಸಾಕ್ಷಿ ಹೇಳಿಕೆಯನ್ನು ಪಡೆದುಕೊಂಡಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 140 ಫ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಈ ಪ್ರಕರಣದಲ್ಲಿ ಕ್ರಮವನ್ನು ತೆಗೆದುಕೊಂಡ ಬಗ್ಗೆ ಕಲಂ 57 ಎಂ.ಡಿ.ಪಿ.ಎಸ್. ಕಾಯಿದೆ ಪ್ರಕಾರ ಪೊಲೀಸ್ ಆಯುಕ್ತರು ಮಂಗಳೂರು ಇವರಿಗೆ ನಿಪಿ–58 ರಂತೆ ವರದಿಯನ್ನು ಸಲ್ಲಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 141 ಫ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ 25.06.2021 ರಂದು ಈ ಪ್ರಕರಣದಿಂದ ಬೇರ್ಪಡಿಸಲ್ಪಟ್ಟ 2 ನೇ ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 142 ಪ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ 30.06.2021 ರಂದು ವಶಪಡಿಸಿಕೊಂಡ ಗಾಂಜಾವನ್ನು inventory ಮಾಡಿಸುವ ಬಗ್ಗೆ ಸತ್ರ ನ್ಯಾಯಾಲಯಕ್ಕೆ ಕೋರಿಕೆ ಪತ್ರವನ್ನು ಸಲ್ಲಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 143 ಪ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ 2.07.2021 ರಂದು ನ್ಯಾಯಾಲಯದ ಆದೇಶದಂತೆ ಪ್ರಕರಣದಲ್ಲಿ ವಶಪಡಿಸಿಕೊಂಡ ಎಲ್.ಎಸ್.ಡಿ. ಮತ್ತು ಗಾಂಜಾವನ್ನು ಮಾನ್ಯ 6 ನೇ ಜೆ.ಎಂ.ಎಫ್.ಸಿ. ನ್ಯಾಯಾಲಯಕ್ಕೆ inventory ಸಲುವಾಗಿ ಹಾಜರುಪಡಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 144 ಪ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನ್ಯಾಯಾಲಯವು ಹಾಜರುಪಡಿಸಿದ ಎ 1 ಎಂದು ಗುರುತು ನೀಡಲಾಗಿದ್ದ ಸ್ವತ್ತಿನಲ್ಲಿದ್ದ 840 ಎಲ್.ಎಸ್.ಡಿ. ಸ್ಟಾಂಪ್ ನ್ನು ಸಂಪೂರ್ಣವಾಗಿ ತಜ್ಞರ ವಿಶ್ಲೇಷಣೆಗೆ ಒಳಪಡಿಸಲು ಬಿಳಿ ಬಟ್ಟೆಯಲ್ಲಿ ಹಾಕಿ ಸೀಲು ಮಾಡಿದ್ದು, ಅದಕ್ಕೆ 'B' ಎಂದು ಗುರುತು ನೀಡಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 145 ಪ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಗಾಂಜಾವನ್ನು ತೆರೆದು ತೂಕ ಮಾಡಲಾಗಿ 26 ಗ್ರಾಂ ಇದ್ದು ಅದನ್ನು ಸಂಪೂರ್ಣವಾಗಿ ತಜ್ಞರ ವಿಶ್ಲೇಷಣೆಗಾಗಿ ಬಿಳಿ ಬಟ್ಟೆಯಲ್ಲಿ ಹೊಲಿದು ಸೀಲು ಮಾಡಿ ಅದಕ್ಕೆ 'C' ಎಂದು ಗುರುತು ನೀಡಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 146 ಪ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಎಲ್.ಎಸ್.ಡಿ. 840 ಸ್ಟಾಂಪ್ ನ್ನು ಸಹ ತೂಕ ಮಾಡಿದ್ದು ಅದು 15.05 ಗ್ರಾಂ ಇದ್ದು, ಆ

ಸಮಯದಲ್ಲಿ ಪ್ರಕ್ರಿಯೆಯ ಛಾಯ ಚಿತ್ರವನ್ನು ಫ್ರಾಸಾ–12 ರವರು ತೆಗೆದಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 147 ಫ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಈ ಬಗ್ಗೆ ನ್ಯಾಯಾಧೀಶರು inventory proceedings ನ್ನು ನಿಪಿ–59 ರಂತೆ ಮಾಡಿದ್ದು, ಹಾಗೆಯೇ ನ್ಯಾಯಾಧೀಶರು ನಿಪಿ–60 ರಂತೆ ಪ್ರಮಾಣ ಪತ್ರವನ್ನು ಮತ್ತು ಸ್ವತ್ತನ್ನು ತಮಗೆ ನೀಡಿದ್ದು, ಅದರಲ್ಲಿ ತನ್ನ ಸಹಿ ನಿಪಿ–59(ಎ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 148 ಫ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಫೋಟೋಗಳನ್ನು ಈಗಾಗಲೇ ಒಟ್ಟಾಗಿ ನಿಪಿ–32 ಎಂದು, ಸಿಡಿಯನ್ನು ನಿಪಿ–32(ಎ) ಎಂದು, ಕಲಂ 65 ಬಿ ಪ್ರಮಾಣ ಪತ್ರವನ್ನು ಈಗಾಗಲೇ ನಿಪಿ–33 ಎಂದು ಗುರುತಿಸಲಾಗಿದ್ದು, ಅದರಲ್ಲಿ ತನ್ನ ಸಹಿ ನಿಪಿ–33(ಬಿ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 149 ಫ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಎಲ್.ಎಸ್.ಡಿ. ಸ್ಟ್ಯಾಂಪ್ ಗಳನ್ನು ಹಾಗೂ ಗಾಂಜಾವನ್ನು ಈಗಾಗಲೇ ಮುದ್ದೆ ಮಾಲು 4 ಮತ್ತು 5 ಎಂದು ಗುರುತಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 150 ಫ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಮುದ್ದೆ ಮಾಲು 5 ರ ಕವರಿನ ಮೇಲೆ ಇರುವ ಚೀಟಿಯನ್ನು ಈಗಾಗಲೇ ನಿಪಿ–49 ಎಂದು ಹಾಗೂ ಅರದಲ್ಲಿ ತನ್ನ ಸಹಿ ನಿಪಿ–49(ಎ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 151 ಫ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ 3.07.2021 ರಂದು ಇಂಡಸ್‌ಇಂಡ್ ಬ್ಯಾಂಕ್ ನಿಂದ ಈ ಪ್ರಕರಣದಿಂದ ಬೇರ್ಪಡಿಸಲ್ಪಟ್ಟ 3 ನೇ ಆರೋಪಿಯ ಖಾತೆ ಸಂ.100061838492 ಇದರ ಕೆ.ವೈ.ಸಿ. ಅರ್ಜಿಯ ಪ್ರತಿ, ಮತ್ತು ವ್ಯವಹಾರಗಳ ಸ್ಟೇಟ್ ಮೆಂಟ್ ನ್ನು ಪಡೆದುಕೊಂಡಿದ್ದು, ಅವುಗಳನ್ನು ಈಗಾಗಲೇ ನಿಪಿ–25 ರಿಂದ 30 ಎಂದು ಗುರುತಿಸಲಾಗಿರುತ್ತದೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 152 ಫ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಖಾತೆಯ ವ್ಯವಹಾರದ ಸ್ಟೇಟ್ ಮೆಂಟ್ ನ್ನು ಪರಿಶೀಲಿಸಲಾಗಿ ದಿಃ 19.03.2020 ರಂದು 2 ನೇ ಆರೋಪಿ ಈತನು 3 ನೇ ಆರೋಪಿಯ ಖಾತೆಗೆ 2,000/– ರೂ.ವನ್ನು ಜಮಾ ಮಾಡಿರುವುದು ಕಂಡು ಬಂದಿದ್ದು, ಸದರಿ ಎಂಟ್ರಿಯನ್ನು ನಿಪಿ–29(ಬಿ) ಎಂದು ಗುರುತಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 153 ಫ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ 29.08.2020 ರಂದು 2 ನೇ ಆರೋಪಿ ಈತನು 3 ನೇ ಆರೋಪಿಯ ಖಾತೆಗೆ 1,000/– ರೂ.ವನ್ನು ಜಮಾ ಮಾಡಿರುವುದು ಕಂಡು ಬಂದಿದ್ದು ಸದರಿ ಎಂಟ್ರಿಯನ್ನು ನಿಪಿ–29(ಸಿ) ಎಂದು ಗುರುತಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ154 ಫ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ 22.08.2021 ರಂದು 1 ನೇ ಆರೋಪಿಯಾದ ನೀವು 3 ನೇ ಆರೋಪಿಯ ಖಾತೆಗೆ 2,000/– ರೂ.ವನ್ನು ಜಮಾ ಮಾಡಿರುವುದು ಕಂಡು ಬರುತ್ತದೆ. ಸದರಿ ಎಂಟ್ರಿಯನ್ನು ನಿಪಿ–29(ಡಿ) ಎಂದು ಗುರುತಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 155 ಫ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ 31.08.2020 ರಂದು 2 ನೇ ಆರೋಪಿ ಈತನು 3 ನೇ ಆರೋಪಿಯ ಖಾತೆಗೆ 4,000/– ರೂ.ವನ್ನು ಜಮಾ ಮಾಡಿರುವುದು ಕಂಡು ಬಂದಿದ್ದು, ಸದರಿ ಎಂಟ್ರಿಯನ್ನು ನಿಪಿ–29(ಇ) ಎಂದು ಗುರುತಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 156 ಫ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ 9.09.2020 ರಂದು 1 ನೇ ಆರೋಪಿಯಾದ ನೀವು ಈ ಪ್ರಕರಣದಿಂದ ಬೇರ್ಪಡಿಸಲ್ಪಟ್ಟ 3 ನೇ ಆರೋಪಿಯ ಖಾತೆಗೆ 15,000/– ರೂ.ವನ್ನು ಜಮಾ ಮಾಡಿರುವುದು ಕಂಡು ಬಂದಿದ್ದುದ ಸದರಿ ಎಂಟ್ರಿಯನ್ನು ನಿಪಿ–29(ಎಫ್) ಎಂದು ಗುರುತಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 157 ಫ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ 11.09.2020 ರಂದು 1 ನೇ ಆರೋಪಿಯಾದ ನೀವು ಈ ಪ್ರಕರಣದಿಂದ ಬೇರ್ಪಡಿಸಲ್ಪಟ್ಟ 3 ನೇ ಆರೋಪಿಯ ಖಾತೆಗೆ 10,000/– ರೂ.ವನ್ನು ಜಮಾ ಮಾಡಿರುವುದು ಕಂಡು ಬಂದಿದ್ದು ಸದರಿ ಎಂಟ್ರಿಯನ್ನು ನಿಪಿ–29(ಜಿ) ಎಂದು ಗುರುತಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 158 ಫ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ 20.09.2020 ರಂದು 2 ನೇ ಆರೋಪಿಯು 3 ನೇ ಆರೋಪಿಯ ಖಾತೆಗೆ 1,200/– ರೂ.ವನ್ನು ಜಮಾ ಮಾಡಿರುವುದು ಕಂಡು ಬಂದಿದ್ದು ಸದರಿ ಎಂಟ್ರಿಯನ್ನು ನಿಪಿ–29(ಹೆಚ್) ಎಂದು ಗುರುತಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 159 ಫ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ 18.02.2021 ರಂದು 2 ನೇ ಆರೋಪಿ ಈತನು 3 ನೇ ಆರೋಪಿಯ ಖಾತೆಗೆ 3,000/–

ರೂ.ವನ್ನು ಜಮಾ ಮಾಡಿರುವುದು ಕಂಡು ಬಂದಿದ್ದು, ಸದರಿ ಎಂಟ್ರಿಯನ್ನು ನಿಪಿ-29(ಐ) ಎಂದು ಗುರುತಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 160 ಫ್ರಾಸಾ-20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ 22.02.2021 ರಂದು 2 ನೇ ಆರೋಪಿ ಈತನು 3 ನೇ ಆರೋಪಿಯ ಖಾತೆಗೆ 4,000/- ರೂ.ವನ್ನು ಜಮಾ ಮಾಡಿರುವುದು ಕಂಡು ಬಂದಿದ್ದು, ಸದರಿ ಎಂಟ್ರಿಯನ್ನು ನಿಪಿ-29(ಜೆ) ಎಂದು ಗುರುತಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 161 ಫ್ರಾಸಾ-20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ 22.06.2021 ರಂದು 2 ನೇ ಆರೋಪಿ ಈತನು 3 ನೇ ಆರೋಪಿಯ ಖಾತೆಗೆ 3,000/- ರೂ.ವನ್ನು ಜಮಾ ಮಾಡಿರುವುದು ಕಂಡು ಬಂದಿದ್ದು, ಸದರಿ ಎಂಟ್ರಿಯನ್ನು ನಿಪಿ-29(ಕೆ) ಎಂದು ಗುರುತಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 162 ಫ್ರಾಸಾ-20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ 1.03.2021 ರಂದು 2 ನೇ ಆರೋಪಿ ಈತನು 3 ನೇ ಆರೋಪಿಯ ಖಾತೆಗೆ 2,500/- ರೂ.ವನ್ನು ಜಮಾ ಮಾಡಿರುವುದು ಕಂಡು ಬಂದಿದ್ದು, ಸದರಿ ಎಂಟ್ರಿಯನ್ನು ನಿಪಿ-29(ಎಲ್) ಎಂದು ಗುರುತಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 163 ಫ್ರಾಸಾ-20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ 27.03.2021 ರಂದು 2 ನೇ ಆರೋಪಿ ಈತನು 3 ನೇ ಆರೋಪಿಯ ಖಾತೆಗೆ 6,000/- ರೂ.ವನ್ನು ಜಮಾ ಮಾಡಿರುವುದು ಕಂಡು ಬಂದಿದ್ದು, ಸದರಿ ಎಂಟ್ರಿಯನ್ನು ನಿಪಿ-29(ಎಂ) ಎಂದು ಗುರುತಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 164 ಫ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ 11.04.2021 ರಂದು 2 ನೇ ಆರೋಪಿ ಈತನು 3 ನೇ ಆರೋಪಿಯ ಖಾತೆಗೆ 5,000/– ರೂ.ವನ್ನು ಜಮಾ ಮಾಡಿರುವುದು ಕಂಡು ಬಂದಿದ್ದು, ಸದರಿ ಎಂಟ್ರಿಯನ್ನು ನಿಪಿ–29(ಎನ್) ಎಂದು ಗುರುತಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 165 ಫ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ 4.05.2021 ರಂದು 2 ನೇ ಆರೋಪಿ ಈತನು 3 ನೇ ಆರೋಪಿಯ ಖಾತೆಗೆ 1,200/– ರೂ.ವನ್ನು ಜಮಾ ಮಾಡಿರುವುದು ಕಂಡು ಬಂದಿದ್ದು, ಸದರಿ ಎಂಟ್ರಿಯನ್ನು ನಿಪಿ–29(ಒ) ಎಂದು ಗುರುತಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 166 ಫ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಈ ಎಲ್ಲಾ ಹಣದ ವ್ಯವಹಾರವನ್ನು ಆರೋಪಿತರು ಯು.ಪಿ.ಐ. ಮೂಲಕ ಮಾಡಿರುವುದು ಕಂಡು ಬರುತ್ತದೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 167 ಫ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಅದೇ ದಿನ ಐ.ಸಿ.ಐ.ಸಿ.ಐ. ಬ್ಯಾಂಕ್ ಪಿ.ಎಂ. ರಸ್ತೆ ಬ್ರಾಂಚ್ ನಿಂದ ಈ ಪ್ರಕರಣದಿಂದ ಬೇರ್ಪಡಿಸಲ್ಪಟ್ಟ 2 ನೇ ಆರೋಪಿ ಖಾತೆ ಸಂ.007201030793 ಇದರ ವಿವರ ಮತ್ತು ಕೆ.ವೈ.ಸಿ. ದಾಖಲೆಗಳನ್ನು ಪಡೆದುಕೊಂಡಿದ್ದು, ಅವುಗಳನ್ನು ಈಗಾಗಲೇ ನಿಪಿ–50 ಮತ್ತು 51 ಎಂದು ಗುರುತಿಸಿದ್ದು, ಅದೇ ದಿನ ಫ್ರಾಸಾ–11 ಮತ್ತು ಫ್ರಾಸಾ–19 ರವರ ಹೇಳಿಕೆಯನ್ನು ತೆಗೆದುಕೊಂಡಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 168 ಫ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ 4.07.2021 ರಂದು ವಶಪಡಿಸಿಕೊಂಡ ಎಲ್.ಎಸ್.ಡಿ. ಮಾದಕ ವಸ್ತುವನ್ನು ತಜ್ಞರ

ಅಭಿಪ್ರಾಯಕ್ಕಾಗಿ ಫ್ರಾಸಾ–16 ರವರ ಮೂಲಕ ಎಫ್.ಎಸ್.ಎಲ್. ಬೆಂಗಳೂರಿಗೆ ಕಳುಹಿಸಿಕೊಟ್ಟಿದ್ದು ಈ ಬಗ್ಗೆ ಇರುವ ರಹದಾರಿ ಪತ್ರವನ್ನು ನಿಪಿ–62 ಎಂದು ಗುರುತಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 169 ಫ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ 5.07.2021 ರಂದು ಫ್ರಾಸಾ–6 ರವರ ಸಾಕ್ಷಿ ಹೇಳಿಕೆಯನ್ನು ಪಡೆದುಕೊಂಡಿದ್ದು, ಎಫ್.ಎಸ್.ಎಲ್. ಬೆಂಗಳೂರು ಇವರು ನೀಡಿದ ಸ್ವೀಕೃತಿ ಪತ್ರವನ್ನು ಈಗಾಗಲೇ ನಿಪಿ–43 ಎಂದು ಗುರುತಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 170 ಫ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ 9.07.2021 ರಂದು ಪ್ರಕರಣದಲ್ಲಿ ವಶಪಡಿಸಿಕೊಂಡ ಗಾಂಜಾವನ್ನು ಆರ್.ಎಫ್.ಎಸ್.ಎಲ್. ಮಂಗಳೂರಿಗೆ ಚಾಸಾ–26 ರವರ ಮೂಲಕ ಕಳುಹಿಸಿಕೊಟ್ಟಿದ್ದು, ಈ ಬಗ್ಗೆ ಇರುವ ರಹದಾರಿ ಪತ್ರವನ್ನು ನಿಪಿ–63 ಎಂದು ಹಾಗೂ ಆರ್.ಎಫ್.ಎಸ್.ಎಲ್. ಮಂಗಳೂರು ಇವರು ನೀಡಿದ ಸ್ವೀಕೃತಿ ಪತ್ರವನ್ನು ನಿಪಿ–64 ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 171 ಫ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ 17.07.2021 ರಂದು ಪ್ರಕರಣದಲ್ಲಿ ಸ್ವಾಧೀನಪಡಿಸಿಕೊಂಡ ದ್ವಿ ಚಕ್ರ ವಾಹನ ಸಂ.ಕೆಎಲ್–18–ಎಫ್–3859 ಇದರ ಬಿ ಎಕ್ಸ್ ಟ್ರಾಕ್ಟ್ ಒದಗಿಸುವಂತೆ ಆರ್.ಟಿ.ಒ. ಗೆ ಪತ್ರವನ್ನು ಬರೆದು ಅಂಚೆ ಮೂಲಕ ಕಳುಹಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 172 ಫ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ 29.07.2021

ರಂದು ನಿಪಿ–65 ರಂತೆ ಬಿ ಎಕ್ಸ್ ಟ್ರಾಕ್ಟ್ ವರದಿಯನ್ನು ಅಂಚೆ ಮೂಲಕ ಪಡೆದಿದ್ದನ್ನು ಕಡತಕ್ಕೆ ಅಳವಡಿಸಿಕೊಂಡಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 173 ಫ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ 31.07.2021 ರಂದು ನ್ಯಾಯಾಲಯಕ್ಕೆ ದಿಃ 12.06.2021 ರಂದು ವಶಪಡಿಸಿಕೊಂಡ ಸ್ವತ್ತಿನ ಬಗ್ಗೆ ಸಲ್ಲಿಸಿದ ಸ್ವತ್ತು ಪಟ್ಟಿಯಲ್ಲಿ ಸ್ವತ್ತು ಪಟ್ಟಿಯ ಕಲಂ ನಂ.5 ರಲ್ಲಿ ಕಣ್ ತಪ್ಪಿನಿಂದ ಬೆರಳಚ್ಚು ಮಾಡಿದ ಕುರಿತಾಗಿ ಮಾಹಿತಿಯನ್ನು ನ್ಯಾಯಾಲಯಕ್ಕೆ ನೀಡಿದ್ದು, ಸದರಿ ಪತ್ರವನ್ನು ನಿಪಿ–66 ಎಂದು, ಅದರಲ್ಲಿ ತನ್ನ ಸಹಿಯನ್ನು ನಿಪಿ–66(ಎ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 174 ಫ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿದಿಃ 21.08.2021 ರಂದು ಬೆಂಗಳೂರು ಚಾಮರಾಜನಗರದ Foreign Post office ನಿಂದ ಅಂಚೆ ಸಂ.LB148954145FR ಇದರ ಕುರಿತಾಗಿ ವರದಿ ಬಂದಿದ್ದು ಅದನ್ನು ಪರಿಶೀಲಿಸಿದಾಗ ಸದರಿ ಅಂಚೆಯು ಫ್ರಾನ್ಸ್ ದೇಶದಿಂದ ಬೆಂಗಳೂರು ಕಸ್ಟಮ್ಸ್ ಮೂಲಕ Foreign Post office ಗೆ ಬಂದಿದ್ದಾಗಿ ಮತ್ತು ಅಲ್ಲಿಂದ ಕಂಕನಾಡಿ ಎಸ್.ಓ. ಗೆ ದಿಃ 9.06.2021 ರಂದು ಬಂದಿದ್ದಾಗಿ ಮಾಹಿತಿಯನ್ನು ನೀಡಿದ್ದು, ಸದರಿ ದಾಖಲೆಯನ್ನು ಈಗಾಗಲೇ ನಿಪಿ–40 ಎಂದು ಗುರುತಿಸಿದ್ದು ಅದರಲ್ಲಿ ತನ್ನ ಸಹಿ ನಿಪಿ–40(ಬಿ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 175 ಫ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ 23.08.2021 ರಂದು ಫ್ರಾಸಾ–14 ರವರ ಸಾಕ್ಷಿ ಹೇಳಿಕೆಯನ್ನು ಪಡೆದುಕೊಂಡಿದ್ದು, ದಿಃ 25.08.2021 ರಂದು 1ನೇ ಆರೋಪಿಯಾದ ನೀವು ನ್ಯಾಯಾಂಗ ಬಂಧನದಲ್ಲಿ ಇದ್ದ ಕಾರಣ ದಿಃ 10.06.2021 ಮತ್ತು ದಿಃ 11.06.2021 ರ

ನಿಪಿ–67 ರಂತೆ ದಿನಚರಿಯನ್ನು ಕಡತಕ್ಕೆ ಅಳವಡಿಸಿ ಮಾನ್ಯ ನ್ಯಾಯಾಲಯಕ್ಕೆ ತಜ್ಞರ ಅಭಿಪ್ರಾಯವನ್ನು ಬಾಕಿ ಇಟ್ಟು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 176 ಪ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ 14.02.2022 ರಂದು ಎಫ್.ಎಸ್.ಎಲ್. ಬೆಂಗಳೂರಿನಿಂದ ತಜ್ಞರ ಎಲ್.ಎಸ್.ಡಿ. ವರದಿಯನ್ನು ನಿಪಿ–34 ರಂತೆ ಪಡೆದಿದ್ದು, ಮಾದರಿ ಸೀಲನ್ನು ನಿಪಿ–35 ಎಂದು ಹಾಗೂ ಅದರಲ್ಲಿ ತನ್ನ ಸಹಿ ನಿಪಿ–35(ಸಿ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 177 ಪ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ 23.02.2022 ರಂದು ಮಾದಕ ದ್ರವ್ಯ ಗಾಂಜಾದ ಕುರಿತಾಗಿ ಮಂಗಳೂರು ಎಫ್.ಎಸ್.ಎಲ್. ತಜ್ಞರ ಅಭಿಪ್ರಾಯವನ್ನು ನಿಪಿ–46 ರಂತೆ ಪಡೆದುಕೊಂಡಿದ್ದು ನಿಪಿ–46, ಮಾದರಿ ಸೀಲನ್ನು ನಿಪಿ–47 ಎಂದು ಗುರುತಿಸಿದ್ದುಸಿ ನಂತರ ಈ ಎರಡು ವರದಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 178 ಪ್ರಾಸಾ–20 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಪ್ರಾಸಾ–1 ರವರು ನಿಪಿ–6 ರಂತೆ, ಪ್ರಾಸಾ–10 ರವರು ನಿಪಿ–24 ರಂತೆ ತನ್ನ ಮುಂದೆ ಹೇಳಿಕೆಯನ್ನು ಕೊಟ್ಟಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 179 ಪ್ರಾಸಾ–21ಶ್ರೀ ರಘು ನಾಯಕ್ ರವರು ತಮ್ಮ ಸಾಕ್ಷ್ಯದಲ್ಲಿ ತಾನು ದಿಃ 7.09.2020 ರಿಂದ 7.07.2023 ರವರೆಗೆ ಕಂಕನಾಡಿ ನಗರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಉಪ ನಿರೀಕ್ಷಕನಾಗಿ ಕರ್ತವ್ಯವನ್ನು ನಿರ್ವಹಿಸಿದ್ದು, ದಿಃ 14.06.2021 ರಂದು ಡಿ.ಸಿ.ಪಿ. ಕಾನೂನು ಸುವ್ಯವಸ್ಥೆ ರವರ ಆದೇಶದ

ಮೇರೆಗೆ ಪೂರ್ವ ಪೊಲೀಸ್ ಠಾಣೆಯ ಪಿ.ಐ. ಫ್ರಾಸಾ-17 ರವರು ಕಂಕನಾಡಿ ನಗರ ಪೊಲೀಸ್ ಠಾಣೆಯ ಪೊಲೀಸ್ ಉಪ ನಿರೀಕ್ಷಕರು ನೀಡಿದ ಜ್ಞಾಪನವನ್ನು ಸ್ವೀಕರಿಸಿ ಪರಿಶೀಲಿಸಿದ್ದು ಅದರಲ್ಲಿ ಸೂಚಿಸಿದ ಈ ಪ್ರಕರಣದ ಈ ಪ್ರಕರಣದಿಂದ ಬೇರ್ಪಡಿಸಲ್ಪಟ್ಟ 2 ನೇ ಆರೋಪಿಯನ್ನು ವಶಕ್ಕೆ ಪಡೆದು ತಮ್ಮ ಮುಂದೆ ಹಾಜರುಪಡಿಸುವಂತೆ ಆದೇಶ ಮಾಡಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 180 ಫ್ರಾಸಾ-21 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆ ಮೇರೆಗೆ ದಿಃ 15.06.2021 ರಂದು ಬೆಳಗ್ಗೆ 5 ಗಂಟೆಗೆ ಮಂಗಳೂರಿನ ಕಂಕನಾಡಿ ನಗರ ಪೊಲೀಸ್ ಠಾಣೆಯಿಂದ ಹುಬ್ಬಳ್ಳಿಯ ತೋಳನ ಕೆರೆ ಹೋಗಿ ಈ ಪ್ರಕರಣದಿಂದ ಬೇರ್ಪಡಿಸಲ್ಪಟ್ಟ 2 ನೇ ಆರೋಪಿ ಪತ್ತೆಗೆ ಪ್ರಯತ್ನಿಸುತ್ತಿದ್ದಾಗ ಸಾಯಂಕಾಲ 5 ಗಂಟೆಗೆ ಬಾತ್ಮಿದಾರರು ಸದರಿ ತೋಳದ ಕೆರೆಯ ಗೋಕುಲ್ ರಸ್ತೆಯಲ್ಲಿ ನಡೆದುಕೊಂಡು ಬರುತ್ತಿರುವುದಾಗಿ ತಿಳಿಸಿದ ಮೇರೆಗೆ ಅಲ್ಲಿಗೆ ಹೋಗಿದ್ದು ಆಗ ಆತನು ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದು ಆತನನ್ನು ಸುತ್ತುವರೆದು ವಿಚಾರಿಸಿದಾಗ ತನ್ನ ಹೆಸರು ಮತ್ತು ವಿಳಾಸವನ್ನು ಹೇಳಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 181 ಸಫ್ರಾಸಾ-21 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಈ ಪ್ರಕರಣದಿಂದ ಬೇರ್ಪಡಿಸಲ್ಪಟ್ಟ 2 ನೇ ಆರೋಪಿಗೆ ಪ್ರಕರಣದ ಬಗ್ಗೆ ವಿಚಾರಿಸಲಾಗಿ ಆತನು ತಪ್ಪು ಒಪ್ಪಿಕೊಂಡ ಮೇರೆಗೆ ಆತನನ್ನು ಸಂಜೆ 5.15 ಕ್ಕೆ ವಶಕ್ಕೆ ಪಡೆದು ಆತನ ಅಜ್ಜನಾದ ಸಿದ್ದಣ್ಣ ತಮ್ಮಯ್ಯ ರವರಿಗೆ ಮಾಹಿತಿಯನ್ನು ನೀಡಿ ನಂತರ ಅಲ್ಲಿಂದ 2 ನೇ ಆರೋಪಿಯೊಂದಿಗೆ ಮಂಗಳೂರಿಗೆ ಹೊರಟಿದ್ದು ದಿಃ 16.06.2021 ರಂದು ಮಧ್ಯಾಹ್ನ 1.20 ಗಂಟೆಗೆ ನಿಪಿ-44 ರ ವರದಿಯೊಂದಿಗೆ ಆತನನ್ನು ಫ್ರಾಸಾ-17 ರವರ ಮುಂದೆ ಹಾಜರುಪಡಿಸಿದ್ದು ಅದರಲ್ಲಿ ತನ್ನ ಸಹಿ ನಿಪಿ-44(ಬಿ) ಯಂತೆ ಇರುತ್ತದೆ ಎಂದು ಗುರುತಿಸಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂ:182 ನಿಮ್ಮ ಪರವಾಗಿ ಯಾರಾದರೂ ಸಾಕ್ಷಿ ಇದ್ದಾರೆಯೇ?

ಉತ್ತರಃ ಇಲ್ಲ

ಪ್ರ.ನಂ:183 ಈ ಕೇಸಿನ ಬಗ್ಗೆ ನೀವು ಏನಾದರೂ ಹೇಳುವುದು ಇದೆಯೇ?

ಉತ್ತರಃ ತಪ್ಪು ಮಾಡಿಲ್ಲ

(ಮೇಲ್ಕಂಡ ಹೇಳಿಕೆಯನ್ನು ನಾನು ಖುದ್ದಾಗಿ 1 ನೆ ಆರೋಪಿಗೆ ತಿಳಿದ ಕನ್ನಡ ಭಾಷೆಯಲ್ಲಿ ಓದಿ ಹೇಳಿ, ಅವರು ಕೊಟ್ಟ ಹೇಳಿಕೆಯನ್ನು ನಾನೇ ಸ್ವತಃ ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸುತ್ತೇನೆ.)

BASAVARAJ

Digitally signed by BASAVARAJ
Date: 2026.05.13 16:49:17 +0530

**(ಬಸವರಾಜ)**

ಸ್ಥಳಃ ಮಂಗಳೂರು **ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

ದಿನಾಂಕ :13.05.2026 **ದ.ಕ., ಮಂಗಳೂರು**.

1 ನೇ ಆರೋಪಿಯ ಸಹಿಃ